Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಕು ೧೭-೨-೧೯೫೦ನೇ ಶುಕ್ರವಾರ | ಸಂಚಿಕೆ ೩೮

ನಮ್ಮ ಶಾಸನ-ವ್ಯಕ್ತಿಯ ಸ್ವತಂತ್ರ ಹಕ್ಕು ಮತ್ತು ಕರ್ತವ್ಯ.

ಲೇಖಕ:-ಶ್ರೀ ಸಿ. ಹಿರಿಯಣ್ಣ ಶೆಟ್ಟಿ, ಬಿ. ಎ.

ಜನವರಿ ೨೬ ರಂದು ಜಾರಿಗೆ ಬಂದ ನಮ್ಮ ರಾಜ್ಯ ಶಾಸನವು ಅತಿ ದೊಡ್ಡದು. ಲೋಕದ ಯಾವ ಕಡೆಯಲ್ಲೂ ಯಾವ ಕಾಲದಲ್ಲೂ ಇಂಥಾ ಘಟನೆಯು ನಡೆದದ್ದು ಚರಿತ್ರೆಯಲ್ಲಿ ಕಾಣುವದಿಲ್ಲ. ಈ ಶಾಸನವು ೪ ಅಧ್ಯಾಯಗಳಾಗಿ ಒಟ್ಟು ೩೯೫ ಆರ್ಟಿಕಲ್ಲ್‌ಗಳಿಂದ ಕೂಡಿದೆ. ಇವನ್ನು ತಯಾರಿಸಲು ಘಟನಾ ಸಮಿತಿಯವರಿಗೆ ಸುಮಾರು ೩ ವರ್ಷಗಳು ಬೇಕಾಗಿವೆ. ಸಮಿತಿಯವರು ಈ ಬಗ್ಗೆ ೧೧೫ ಸಲ ಸಭೆ ಸೇರಿರುವರು. ೫೬೫ ದಿವಸಗಳನ್ನು ಇವರ ಬಗ್ಗೆ ಉಪಯೋಗಿಸಿರುವರು. ಇದಕ್ಕೆ ಸುಮಾರು ೬೬೩ ತಿದ್ದುಪಡಿ ಠರಾವುಗಳು ಬಂದಿದ್ದವು. ಆ ಪೈಕಿ ಸುಮಾರು ೨೪೩ ಠರಾವುಗಳು ಚರ್ಚಿಸಲ್ಪಟ್ಟವೆ ಇದಕ್ಕೆ ಒಟ್ಟು ೬೪,೦೦,೦೦೦ ರೂಪಾಯಿ ಖರ್ಚಾಗಿದೆಯಂತೆ. ಈ ಶಾಸನವನ್ನು ಸಮಿತಿಯವರು ತಯಾರಿಸುವ ಸಮಯ ಆಗಾಗ ಪ್ರೇಕ್ಷಕರಾಗಿ ಬಂದ ಒಟ್ಟು ಜನ ಸಂಖ್ಯೆಯು ೫೫,೦೦೦ ಕ್ಕೆ ಮಿಂಚಿದೆಯಂತೆ. ಇದರ ಪೂರ್ಣ ವಿಚಾರವನ್ನು ಬರೆದಿಡಲು ೨೦-೪೪ ಇಂಚು ಫೂಲ್‌ಸ್ಕೇಪ್ ಕಾಗದಗಳು ಸುಮಾರು ೨೦,೦೦,೦೦೦ ತಾಪುಗಳು ಬೇಕಂತೆ. ಆ ಕಾಗದಗಳನ್ನು ಒಂದರ ಮೇಲೊಂದನ್ನು ಇಡಲು ಸುಮಾರು ೨೦೦ ಗಜ ಎತ್ತರವಾಗುವದಂತೆ. ಈ ಶಾಸನವು ಸುಮಾರು ೩೨೦ ಮಿಲಿಯ ಜನರಿಗೆ ಲಗಾಮಾಗುವದು. ಇದರಲ್ಲಿ ಸುಮಾರು ೧೫೦ ಮಿಲಿಯಕ್ಕೂ ಮಿಕ್ಕಿದ ಜನರು ಮತದಾರರಾಗುವರು. ಈ ಶಾಸನದ ಪ್ರಕಾರ ೪೦೦ ಚುನಾವಣಾ ಸ್ಥಾನಗಳಲ್ಲಿ ೪೫೦ ಮೆಂಬರರು ಚುನಾಯಿತರಾಗಬೇಕಾಗುತ್ತದೆ. ಆ ಪೈಕಿ ೩೮೦ ಮೆಂಬರರು ಪ್ರಾಂತಗಳ ಅಸೆಂಬ್ಲಿ ಕೌನ್ಸಿಲುಗಳ ಬಗ್ಗೂ ಉಳಿದವರ ಪೈಕಿ ೫೦ ಮೆಂಬರರು ಕೇಂದ್ರ ಅಸೆಂಬ್ಲಿಯ ಬಗ್ಗೂ ೨೦೦ ಜನರು ಕೇಂದ್ರ ಕೌನ್ಸಿಲಿನ ಬಗ್ಗೂ ಆಗಿರುವರು.

ಸಮಿತಿಯವರು ಈ ಶಾಸನವನ್ನು ತಯಾರಿಸುವಾಗ ಅನ್ಯ ದೇಶದ ಪ್ರಮುಖರ ಸಹಾಯವನ್ನು ಕೋರದೆ ನಮ್ಮ ಪ್ರತಿನಿಧಿಗಳಿಂದಲೇ ನಮಗಾಗುವ ಶಾಸನವನ್ನು ತಯಾರಿಸಿದರು. ಇದರಲ್ಲಿ ನಮಗೆ ಬೇಕಾದ ರಾಜಕೀಯ ಅನುಕೂಲತೆಗಳಿರುವವು. ಪ್ರತಿಯೊಬ್ಬ ಪ್ರಾಯಸ್ಥ ಮೆಂಬರನಿಗೂ ರಾಜ್ಯದ ಕಾರಭಾರಿನಲ್ಲಿ ಸಹಕಾರವ ಅಧಿಕಾರ ಮಾತ್ರವಲ್ಲ, ಕಾರ್ಯಭಾರದಲ್ಲಿ ಯಾವ ಕೆಲಸಕ್ಕೂ ಯೋಗ್ಯತೆ ಇರುವಹಾದರೆ ಅರ್ಹನಾಗುತ್ತಾನೆ. ಪ್ರತಿಯೆಂದು ರಾಜ್ಯಾಂಗ ರಚನೆಯಲ್ಲಿ ಮೂರು ಅಂಗಗಳು ಅಥವಾ ಭಾಗಗಳಿರುವವು. ೧. ಆಡಳಿತೆ ಮಂಡಳಿ (Executive) ೨ ಶಾಸನಭಾಗ (Legislature) ೩. ನ್ಯಾಯ ಭಾಗ (Judiciary) ಇವುಗಳಲ್ಲಿ ಮೊದಲು ಹೇಳಿದ ೧ ಮತ್ತು ೨ನೇ ಭಾಗಗಳು (ತಿಂದರೆ ೨/೩ ಅಂಶಗಳು) ಸೀದಾ ಅಥವಾ ರೂಪಾಂತರದಿಂದ ಚುನಾಯಿತ ರಾಗತಕ್ಕದ್ದರಿಂದ ಈ ಮೂರ ೨/೩ನೇ ಅಂಶ ನಮ್ಮಿಂದಲೇ ಚುನಾಯಿತರಾದ ನಮ್ಮ ಅಧಿಕಾರದೊಳಗಿರುವವರು ಅಥವ ನಮಗೆ ಜವಾಬ್ದಾರರಾಗಿರುವವರು. ೨೧ ವರ್ಷ ಪ್ರಾಯವ್ವಾದ ಪ್ರತಿಯೊಬ್ಬ ಹೆಂಗಸಿಗೂ ಗಂಡಸಿಗೂ ಓಟು ಇರುವುದರಿಂದ ಆಡಳಿತ ಮಂಡಳಿ ಮತ್ತು ಶಾಸನ ಸಭೆಯು ಪ್ರಜಾಪ್ರಭುತ್ವಕ್ಕೆ ಒಳಪಟ್ಟಿರುವುದು ಹಿನೇ ಭಾವ್ಯವು ಪ್ರಜಾ ಪ್ರಭುತ್ವಕ್ಕೆ ಹೊಗಪಟ್ಟ ಜೆಂತ ಭಾವಿಸಬಾರದು. ನಮ್ಮ ಹಿತದೃಷ್ಟಿಯಿಂದಲೇ ಅದನ್ನು ಯೂರ ಅಧಿಕಾರದೊಳಗೆ ಅಂದರೆ ಹಂಗನೊಳಗೆ ಇಡಲಿಲ್ಲ. ಅವರನ್ನು ಸ್ವತಂತ್ರ ಭಾಗವೆಂಬುದಾಗಿ ನಾವೇ ಮಾಡಿದ್ದಾಗಿದೆ. ಎಲ್ಲರಿಗೂ ಒಂದೇ ತೆರದ ನ್ಯಾಯ ತೀರ್ಮಾನವಾಗಬೇಕಾದರೆ ಹಿಂಗೆ ಮಾಡಲೇ ಬೇಕಾಗಿದೆ. ಆದರೆ ಈ ಮೂರನೇ ಭಾಗದ ಸ್ಥಾನಕ್ಕೆ ಬೇಕಾದ ಯೋಗ್ಯತೆ ಯೂ ಅನುಕೂಲತೆ ಇರುವದಾದರೆ ಪ್ರತಿಯೊಬ್ಬನಿಗೂ ಈ ಸ್ಥಾನವನ್ನು ಹೊಂದಲು ಅರ್ಹತೆ ಉಂಟು. ಇನ್ನು ನಮ್ಮ ಸರಕಾರದ ನೌಕರಿಯ ಬಗ್ಗೆ ಸಹಾ ಯೋಗ್ಯತೆ ಇರುವ ದಾದರೆ ಯಾವ ವ್ಯಕ್ತಿಗೂ ಪ್ರತಿಬಂಧಕ ವಿಲ್ಲ. ಈ ಎಲ್ಲಾ ಕಾರಣಗಳಿಂದ ನಾವು ತಿಳಿಯಬೇಕಾದುದೇನೆಂದರೆ ನಮ್ಮ ಸರ್ಕಾರ ತಳಹದಿಯೂ ನಮ್ಮಲ್ಲಿರುವುದು. ಆಡಳಿತೆಯ ಮಂಡಳಿಯು ಸ್ವೇಚ್ಛೆಯಂತೆ ನಡೆದರೆ, ದುರ್ವ್ಯಯ ಮಾಡಿದರೆ ಎಸೆಂಬ್ಲಿಯವರು ಸರಿಯಾದ ವಿಚಾರಣೆಗೆದುಕೊಳ್ಳುವರೆ ತಪ್ಪಿದಲ್ಲಿ ಇವರೆಲ್ಲರನ್ನೂ ಕೇಳುವ ಅಧಿಕಾರವು ನಮಗಿರುವುದು. ಮತ್ತು ಮುಂದೆ ಬರುವ ಚುನಾವಣೆ ಕಾಲದಲ್ಲಿ ತಪ್ಪಿತಸ್ಥರಿಗೆ ಜೆನ್ನಾಗಿ ಬುದ್ಧಿ ಕಲಿಸಬಹುದು. ಚುನಾಯಿತರಾದ ಮೆಂಬರರ ತಪ್ಪು ನಮ್ಮದೇ ಆಗುವದು. ನಾವು ನಮ್ಮನ್ನೇ ದೂರಬೇಕೇ ಹೊರತು ಅನ್ಯರನ್ನು ಈ ವರೆಗೆ ದೂರಿದಂತೆ ಇನ್ನು ಮುಂದೆ ಆಗದು. ಒಳ್ಳೇದು ಕೆಟ್ಟದ್ದು ನಮ್ಮ ಕೈಯಲ್ಲಿಯೇ ಇದೆ.

ನಮ್ಮ ಶಾಸನದ ಮೇರೆಗೆ ನಮಗೆ ಕೆಲವು ಹಕ್ಕುಗಳು ಬಂದಿವೆಯಾದರೂ ಅವುಗಳ ಒಟ್ಟಿಗೆ ಕೆಲವು ಜವಾಬ್ದಾರಿಗಳು ಸಹ ಅಂಟಿಕೊಂಡೇ ಇವೆ ಎಂಬುದನ್ನು ತಿಳಿಯಲೇಬೇಕು. ಜವಾಬ್ದಾರಿಯಿಲ್ಲದ ಹಕ್ಕಿಗೆ ಬೇಜವಾಬ್ದಾರಿ ಹಕ್ಕೆನ್ನುತ್ತಾರೆ. ಅಂಥಾ ಹಕ್ಕಿಗೆ ಕಿಮ್ಮತ್ತಿಲ್ಲ. ಬೇಜವಾಬ್ದಾರಿ ಹಕ್ಕುಗಳು ನಮಗೂ ನಮ್ಮ ಸಮಾಜಕ್ಕೂ ಹಿತಕರವಲ್ಲ. ಪ್ರತಿ ಒಂದು ಹಕ್ಕಿಗೆ ಕರ್ತವ್ಯದರವಾದ್ದು ತಾಲೆಗಳು ಬೇಕಂತ ನಾವು ಕೂಗೆಬ್ಬುವೆವು. ಆದರ ಮಿಕ್ಕಳನ್ನು ಶಾಲೆಗೆಳುಹಿಸಿ ವಿದ್ಯಾಭ್ಯಾಸ ಮಾಡಿಸುವ ಜವಾಬ್ದಾರಿಕೆಯು ನಮ್ಮನ್ನು ಹೊಂದಿಸಿ. ಈ ಹಕ್ಕು ನಮಗೆ ಕೊಟ್ಟಿದ್ದಾರೆ. ಈ ಹಕ್ಕು ನಮಗೆ ಕೊಟ್ಟಿದ್ದಾರೆ. ಈ ಹಕ್ಕನ್ನು ಉಪಯೋಗಿಸುವ ಜವಾಬ್ದಾರಿಕೆಯು ನಮ್ಮ ಮೇಲಿದೆ. ಕೆಲ ಕೊಡಬೇಕೆಂಬ ಬೊಬ್ಬೆ ಕೇಳುತ್ತದೆ. ಹಾಗೆಯೇ ಸುಮ್ಮನೆ ಉಂಡು ತಿರುಗದೆ ದುಡಿದು ತಿನ್ನುವ ಜವಾಬ್ದಾರಿಕೆಯೂ ನಮ್ಮ ಮೇಲಿದೆ.

ನಮಗೆ ಸಿಕ್ಕಿದ ಓಟಿನ ಹಕ್ಕನ್ನು ನಾವು ಸರಿಯಾಗಿ ಉಪಯೋಗಿಸದೆ ಇರುವದಾದರೆ ಹೇಡಿಯು ಕೈಯಲ್ಲಿ ಬ್ರಹ್ಮಾಸ್ತ್ರವನ್ನು ಕೊಟ್ಟಂತೆಯೇ ಸರಿ. ಆಥವಾ ಈ ಹಕ್ಕನ್ನು ನಾವು ಇತರರ ದುರ್ಲೋಭದನೆಗೆ ಅಥವಾ ಒಳಸಂಚಿಗೆ ಸೇರಿದ ಇನ್ನಿತರ ರೂಪದಿಂದ ದುರುಪಯೋಗ ಮಾಡಿದರೆ ಭಸ್ಮಾಸುರನಿಗೆ ಉರಿಹಸ್ತ ಸಿಕ್ಕಿದಂತಾಗುವುದು. ನಮ್ಮ ವಲಂದಿನ ಆಗುಹೋಗುಗಳೆಲ್ಲಾ ನಮಗಿರುವ ಓಟಿನ್ನು ಹೊಂದಿರುವುದರಿಂದ ಇದ್ದು ಬಹಳ ಬೆಲೆಯುಳ್ಳದ್ದು ಎಂಬುದನ್ನು ನಾವು ಮರೆಯಲೇಬಾರದು. ಪ್ರಜಾಮತ ಸರಕಾರವಿರುವ ಯೂರೋಪು ಮತ್ತು ಅಮೇರಿಕ ದೇಶಗಳಲ್ಲಿ ಪ್ರಾಯಸ್ಥರೆಲ್ಲರಿಗೂ ಓಟು ಇರುವದಾದರೂ ಅಲ್ಲಿರುವ ಜನರು ವಿದ್ಯಾವಂತರು; ಅದರ ಜವಾಬ್ದಾರಿಕೆಗಳೇನೆಂಬುದನ್ನು ಚೆನ್ನಾಗಿ ತಿಳಿದಿರುವರು. ಮತಗಣನೆಯು ಸಮಯ ಬಹು ದೂರದಿಂದ ಬಂದು ತಮ್ಮ ಕರ್ತವ್ಯವನ್ನು ಪರಿಪಾಲಿಸುವರು. ಆಸ್ಟ್ರೇಲಿಯಾ ಮತ್ತು ಸ್ವಿಟ್ಜರ್ಲೆಂಡ್ ಈ ಎರಡು ದೇಶಗಳಲ್ಲಿ ಚುನಾವಣೆಯ ಸಮಯ ಓಟು ಕೊಡದ ವ್ಯಕ್ತಿಯ ಹೆಸರನ್ನು ಟೀಕಿಸುವುದಲ್ಲದೆ ಶಿಕ್ಷೆ ವಿಧಿಸುವ ಕಾನೂನು ಜಾರಿಯಲ್ಲಿದೆ. ನಮ್ಮ ಜನರು ಅವಿದ್ಯಾವಂತರು. ಪ್ರಜಾಮತ ಸರಕಾರದ ಅರಿವಿಲ್ಲದವರು. ಇನ್ನು ಅನೇಕರು ಪರರ ಹಂಗಿನವರು ಆದ್ದರಿಂದ ಈ ಕಾರಿತು ಹಲವು ರಾಜಕೀಯ ತಜ್ಞರು ಸಂದೇಹ ಸೂಚಿಸಿರುವರು. ಆದರೆ ಮತದಾರರು ಬಹು ಸಂಖ್ಯೆಯಲ್ಲಿರುವುದರಿಂದ ಹಣ ಒಡೆದಿಂದ ಅಥವಾ ಇನ್ನಿತರ ದುರ್ದಾರಿಯಿಂದ ಮೆಂಬರರು ಚುನಾಯಿತರಾಗಲು ಇದರಿಂದ ಕಷ್ಟವಾದೀತು. ಪ್ರಜಾಮತ ಸರಕಾರಕ್ಕೆ ಬೆಂಬಲವೇ ಮತದಾರರು. ಆವರು ತಮ್ಮ ಕೆಲಸವನ್ನು ಸರಿಯಾಗಿ ಪೂರೈಸದೆ ಇರವಲ್ಲಿ ಕಾವಲುಗಾರರು ಕೋಟೆಯ ಬಾಗಿಲಲ್ಲಿ ನಿದ್ದೆ ಮಾಡಿದಂತೆಯೇ ಸರಿ ಇವರಿಗೂ ಸೈನ್ಯ ಬಿಟ್ಟು ವೈರಿ ಸೈನ್ಯ ಸೇರಿದವರಿಗೂ ಏನೂ ವ್ಯತ್ಯಾಸವಿಲ್ಲ. ಓಟರರು ತಮ್ಮ ಕರ್ತವ್ಯವನ್ನು ಪೂರೈಸುವರೆ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸಂಗತಿಗಳನ್ನು ತಿಳಿದುಕೊಳ್ಳಬೇಕು. ವಿದ್ಯಾವಂತರು ಪುಸ್ತಕಗಳನ್ನು ವರ್ತಮಾನ ಪತ್ರಿಕೆಗಳನ್ನು ಓದಿ ತಿಳಿದುಕೊಳ್ಳುತ್ತಾರೆ. ಆದರೆ ನಮ್ಮಲ್ಲಿ ಹೆಚ್ಚಿನ ಜನರು ಅವಿದ್ಯಾವಂತರು. ಇವರು ಹೇಗೆ ಇದನ್ನೆಲ್ಲಾ ತಿಳಿಯುವದು?' ಈ ಬಗ್ಗೆ ವಿದ್ಯಾವಂತರು ಸಂಸ್ಥೆ ಸಂಘಗಳನ್ನು ಬಲ್ಲಲ್ಲಿ ಸ್ಥಾಪಿಸಿ, ಜನಂಗೆ ಪ್ರಚಾರ ಮಾಡಬೇಕು. ನಮ್ಮ ಸ್ವಾತಂತ್ರ್ಯವು ಸ್ಥಿರವಾಗಿ ನಿಲ್ಲಬೇಕಾದರೆ ನಾವು ಯಾವಾಗಲೂ ಜಾಗರೂಕರಾಗಿರಬೇಕು. (The price of Liberty is eternal vigilance) ಸ್ವತಂತ್ರ ಸಿಕ್ಕಿತೆಯೆಂದು ಸುಮ್ಮನಾದರೆ ಕ್ರೂರ ರೂಪದ ಸರ್ವಾಧಿಕಾರವು ತಲೆ ಎತ್ತಿ ನಮ್ಮನ್ನು ಬಗ್ಗು ಬಡಿದೀತು. ನಾವು ನಮ್ಮ ಸ್ವಾರ್ಥವನ್ನು ಬಿಟ್ಟು ಸಾರ್ವಜನಿಕ ವಿಚಾರದಲ್ಲಿ ತಲೆಹಾಕಿ ಕೆಲಸ ಮಾಡಬೇಕು.

ನಮ್ಮ ದೇಶದಲ್ಲಿ ಈಗ ಒಂದೇ ರಾಜಕೀಯ ಪಕ್ಷ ಇರುವುದು. ಪ್ರಜಾಪ್ರಭುತ್ವದ ಬೆಳವಣಿಗೆಗೆ ಹೀಗಿರುವದು ಜಾಲೋದಲ್ಲ. ಸ್ವತಂತ್ರವನ್ನು ಪಡೆಯಬೇಕಾದರೆ ಹೀಗೆ ಇದ್ದದ್ದು ಸರಿ. ಆಗ ಸ್ವತಂತ್ರದ ಹೋರಾಟ ಒಂದೇ ಆದ್ದರಿಂದ ಒಂದೇ ಪಾರ್ಟಿ ಬೇಕಾಗಿತ್ತು. ಈಗ ಸರ್ವ ವಿಚಾರದಲ್ಲೂ ವಿವರ್ಶೆಯಾಗಬೇಕಾದರಿಂದ ಶಿಸ್ತಿಗೆ ಒಳಪಟ್ಟಿರುವ ಒಂದೇ ಪಾರ್ಟಿಯಿಂದ ಸರಿಯಾಗಿ ವಿವರ್ಶೆಯಿಂದ ತೀರ್ಮಾನವಾಗುವದು ಅಸಾಧ್ಯ. ಆದರಿಂದ ಇನ್ನು ಹೆಚ್ಚೆರಡು ಪಾರ್ಟಿಗಳು ಅತ್ಯ. ಈಗ ಎಷ್ಟೋ ಪಂಗಡಗಳು ಆವೆ ಅವುಗಳಿಂದ ದೇಶಕ್ಕೆ ಕೆಟ್ಟದ್ದೇ ಹೊರತು ಒಳ್ಳೆಯದಲ್ಲ. ನಿಜವಾದ ತತ್ವಗಳನ್ನು ಆಧಾರವಾಗಿಟ್ಟುಕೊಂಡ ಕಾಯ್ದೆ ದೆಶಿರ ಪಾರ್ಟಿಗಳು ಬೇಕಾಗಿವೆ. ಆಂಥಾಗಳಲ್ಲಿ ಜನರಿಗೆ ವಿಶ್ವಾಸ ಹುಟ್ಟುತ್ತದೆ. ಹೀಗೆ ಬೇರೆ ಬೇರೆ ಪಾರ್ಟಿಗಳಿರುವುದರಿಂದ ಬಲ್ಯೇದು ಮತ್ತು ಕೆಟ್ಟದ್ದು ವಿವರ್ಶೆಸುವದಕ್ಕೆ ಸಹಾಯವಾಗುತ್ತದೆ. ಪಾರ್ಟಿಗಳು ಉಪನ್ಯಾಸ ಮೂಲಕ ತಮ್ಮ ಕಡೆಯವರಿಗೆ ಬೋಧಪರವಾದೆ ಉಪನ್ಯಾಸಗಳನ್ನು ಕೊಡುತ್ತಾರೆ. ಚುನಾವಣೆಯ ಕಾಲದಲ್ಲಿ ಮೂಲೆ ಮೂಲೆಯಲ್ಲಿರುವ ಓಟರರನ್ನು ಕರೆದು ತಂದು ಓಟು ಕೊಡಿಸುವರು. ಅನೇಕ ಕಡೆಗಳಲ್ಲಿ ಪ್ರಾಯಸ್ಥರ ಶಾಲೆಯನ್ನು ತೆರೆದು ವಿದ್ಯೆ ಕಲಿಸುವರು. ಮತದಾರರು ಓಟುಗಳನ್ನು ದುರುಪಯೋಗ ಮಾಡದಂತೆ ಜಾಗರೂಕರಾಗಿ ಸರಿದಾರಿಗೆ ತರುವರು. ತಪ್ಪುಗಳನ್ನು ಕಂಡುಹಿಡಿದು ಬಯಲಿಗೆ ತರುವ ಇನ್ನೊಂದು ಪಾರ್ಟಿಯು ಇಲ್ಲದಿರುವಲ್ಲಿ ಪಾರ್ಟಿಯ ಮೆಂಬರರು ತಮ್ಮ ತಮ್ಮೊಳಗೆ ಜಗಳವಾಡುವದಲ್ಲದೆ ಪಾರ್ಟಿಯೊಳಗೆ ದ್ವಿಸಕ್ಷಗಳಾಗಿ ಪಾರ್ಟಿಯ ಐಕ್ಯತೆಯನ್ನೇ ಹಾಳು ಮಾಡುತ್ತಾರೆ.

ನನಯುಗ.

ಆಂಧ್ರಸೈಕ್ಲೋನ್ [ಬಿರುಗಾಳಿ] ಸಂರಕ್ಷಣಾ ನಿಧಿ.

ಕೊಡಗಿನ ೀಫ್ ಕಮಿಷನರ ಪ್ರಕಟಣೆ.

೧೯೧೯ನೇ ಡಿಸೆಂಬರ್ ೩ ನೇ ತಾರೀಕಿನಲ್ಲಿ ಮದರಾಸಿನ ಪ್ರಧಾನ ಮಂತ್ರಿಯವರು ಪ್ರಕಟಿಸಿದ ಮೇಲ್ಕಂಡ ವಿಷಯ ಈ ಕೆಳಗಿನ ವಿನಂತಿ ಪತ್ರವನ್ನು ಸಾರ್ವಜನಿಕರ ಅವಗಾಹನೆಗಾಗಿ ಪುನಃ ಪ್ರಕಟಿಸಲಾಗಿದೆ. ಕೊಡಗಿನ ಮಹಾಜನರ ಔದಾರ್ಯ ಪರೀಕ್ಷೆಯು ಈಚೆಗೆ ಬಹುಮಟ್ಟಿಗೆ ನಡೆದಿದೆಯೆಂಬುದನ್ನು ನಾನು ಚೆನ್ನಾಗಿ ಬಲ್ಲೆನು. ಈ ಸಂದರ್ಭದಲ್ಲಿ ಅನೇಕ ಮುಖವಾಗಿ ವಿವಿಧ ಸಂಧರ್ಭಗಳಲ್ಲಿ ಉದಾರ ಹಸ್ತದಿಂದ ಸಹಾಯ ನೀಡಿದ ಸರ್ವರಿಗೂ ನನ್ನ ಅಂತ್ಯಂತ ಕೃತಜ್ಞತೆಯನ್ನು ಸೂಚಿಸುವೆನು. ಉತ್ತರ ಆಂಧ್ರ ಪ್ರಾಂತದಲ್ಲಿ ಬಿರುಗಾಳಿಯಿಂದುಂಟಾಗಿರುವ ಅನಾಹುತವು ಅನಿರೀಕ್ಷಿತವಾದುದಾಗಿದೆ. ಮತ್ತು ಅಪಾರ ಜೀವ ಹಾನಿಯನ್ನು ನಷ್ಟವನ್ನೂ ಉಂಟುಮಾಡಿದೆ. ಈ ಅನಾಹುತವು ಎಷ್ಟು ಅಪಾರವಾಗಿದೆಯೆಂಬುದನ್ನು ಮದರಾಸಿನ ಪ್ರಧಾನ ಮಂತ್ರಿಯವರ ವಿನಂತಿ ಪತ್ರದಿಂದ ಅರಿಯಬಹುದಾಗಿದೆ. ಇನೇ ಬಗೆಯ ಅನಾಹುತದಿಂದ ೧೮೫೫ರ ಕ್ವೆಟ್ಟ ಭೂಕಂಪನ ಕಾಲದಲ್ಲಿ ಕೊಡಗಿನವರು ಕ್ವೆಟ್ಟ ಭೂಕಂಪ ನಿವಾರಣಾ ಸಮಿತಿಯವರ ಪ್ರಾರ್ಥನೆಯನ್ನು ಮನ್ನಿಸಿ ಅತಿ ಔದಾರ್ಯದಿಂದ ಸಹಾಯ ನೀಡಿರುವರು. ಅದರಂತೆಯೇ ಪ್ರಧಾನ ಮಂತ್ರಿಯವರ ಆಂಧ್ರ ಜಿಲ್ಲೆಯವರ ಸಂರಕ್ಷಣಾರ್ಥವಾಗಿ ಸಹಾಯ ಕೋರಿದ ವಿನಂತಿಗೆ ತೀವ್ರ ಸಹಾಯವು ಸರ್ವರಿಂದಲೂ ದೊರೆಯುವುದೆಂದು ನನಗೆ ಭರವಸೆಯಿದೆ. ಎಷ್ಟೇ ಅಲ್ಪವಾದರೂ ಎಲ್ಲ ವೊಬಲಗನ್ನೂ ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲಾಗುವುದು. ಈ ಬಗೆಯ ಹಣವನ್ನು ತಾಲೋಕು ಸುಭೇದಾರರುಗಳಿಗಾಗಲೀ ಅಥವಾ ಅವರಿಂದ ಅಧಿಕೃತೆರಾದ ಇತರ ಅಧಿಕಾರಿಗಳಿಗಾಗಲೀ ಈಡುವುದು ಅವಶ್ಯವಿರುವಷ್ಟು ಕವಿಟಿಗಳನ್ನು ಸ್ಥಾಪಿಸಿ ಆ ಕವಿಟಿಗಳಿಂದ ವಸೂಲು ಮಾಡಲ್ಪಟ್ಟ ವೊಬಲಗುಗಳನ್ನು ಸ್ವೀಕರಿಸಿ ಈ ಎಲ್ಲಾ ನಿಧಿಯನ್ನೂ ಮದರಾಸಿನ ಮಾನ್ಯ ಮಂತ್ರಿಗಳಿಗೆ ಕಳುಹಿಸಿ ಕೊಡಲು ನನಗೆ ಕಳುಹಿಸಿಕೊಡುವಂತೆ ಸುಭೇದಾರರುಗಳನ್ನು ಕೇಳಿಕೊಳ್ಳಲಾಗಿದೆ.

ಮದರಾಸಿನ ಮಾನ್ಯ ಪ್ರಧಾನ ಮಂತ್ರಿಯವರ ವಿನಂತಿ ಪತ್ರ.

೧೯೪೯ನೇ ಇಸವಿಯ ಸೆಪ್ಟಂಬರ್ ಕೊನೆಯ ಭೂಕಂಪನದಲ್ಲಿ ಉಂಟಾದ ಅಪಾರ ನೆರೆ ಹಾವಳಿಯಿಂದಲೂ ಅವರ ಮರು ತಿಂಗಳಲ್ಲಿ ಒದಗಿದ ಭಯಂಕರವಾದ ಬಿರುಗಾಳಿಯು ಅನಾಹುತದಿಂದಲೂ ವಿಶಾಖಪಟ್ಟಣ, ಪೂರ್ವ ಮತ್ತು ಪಶ್ಚಿಮ ಗೋದಾವರಿ, ಕೃಷ್ಣ ಮತ್ತು ಗುಂಟೂರು ಜಿಲ್ಲೆಗಳಲ್ಲಿಯೂ, ನೆಲ್ಲೂರು, ಕಡಪಾ, ಕರ್ನೂಲು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿಯೂ ವಿಕರೀತ ವಿನಾಶಕರವು ಆದ ಅಪಾರ ನಷ್ಟ ಉಂಟಾಗಿರುವುದು. ಸಾರ್ವಜನಿಕರಿಗೆ ತಿಳಿದ ವಿಷಯವಾಗಿದೆ. ಮೊದಲೇಳಿದ ಜಿಲ್ಲೆಗಳಲ್ಲಿ ನಷ್ಟವು ವಿಸ್ತಾರವಾಗಿರುವುದು. ನೆರೆಯ ಹಾವಳಿಯೂರುಗಾಳಿಯು ಒಟ್ಟಾಗಿ ಲಕ್ಷಲ ಮನ್ನು ಜೀವನವನ್ನು ಬಲಿಗೊಂಡವು. ೩೫,೦ ದನಕರುಗಳೂ, ನೂರಾರು ಕುರಿತ್ತು ಆಡುಗಳು ನಾಶವಾದವು. ೩,೦೦೦ಕ್ಕೆ ಮೇಲ್ಪಟ್ಟು ವಾಸಮಾಡುವ ಗೃಹಗಳೂ, ಮನೆಗಳೂ, ಸಂಪೂರ್ಣನಾಶವಾಗಿವೆ. ಒಕ್ಕಲು ಹಾಕಿದ ಪಸಲು ಬಹುಭಾಗವು ನೀರು ಪಾಲಾದವು. ೧೭,೩೫'೦೦೦ ಏಕರೆಗಳ ವಿಸ್ತೀರ್ಣದಲ್ಲಿ ನಿಂತಿದ್ದ ಬೆಳೆಗಳೆಲ್ಲಾ ಅಪಾರ ನವಾಗಿದೆಯೆಂಬುದಾಗಿ ವರದಿ ಬಂದಿದೆ. ಇದು ವರೆಗೆ ಆಗಿರುವ ನಷ್ಟವನ್ನು ದ್ಯ ರೂಪದಲ್ಲಿ ಮೂವತ್ತು ಕೋಟಿ ರೂಪಾಯಿಗಳಷ್ಟು ಆಗಬಹುದೆಂದು ಅಂದಜು ಮಾಡಲಾಗಿದೆ.

೨. ಜನರಿಗೆ ಅನರಲ್ಲೂ ಮುಖ್ಯವಾಗಿ ಬಡವರಿಗೆ ಯಾವ ರೀತಿಯಲ್ಲೂ ಸ್ಸ ಕಷ್ಟಗಳುಂಟಾಗಿವೆಯೆಂಬುದನ್ನು ಊಹಿಸುವುದು ಕಷ್ಟವಲ್ಲ. ಇದರಲ್ಲಿ ನೇಕರು ವಾಸಕ್ಕೆ ಮನೆ ಇಲ್ಲದೆ ನಿರಾಶ್ರಿತರಾಗಿ ತಮ್ಮ ಸಮಸ್ತವನ್ನೂ ಕಳೆದುಕೊಂಡಿರುವರು. ಅವರ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೂ ಅವರ ವ್ಯಾಪಾರದ ಸರಕುಗಳನ್ನು ಒದಗಿಸಿಕೊಂಡು ಅವುಗಳ ಸಹಾಯದಿಂದ ಪುನಃ ಅವರ ಜೀವನ ಮಾರ್ಗವನ್ನು ಕಲ್ಪಿಸಿಕೊಳ್ಳುವುದಕ್ಕೂ ಸಹಾಯ ಮಾಡಬೇಕಾದುದು ಅತ್ಯಾವಶ್ಯಕವಾಗಿದೆ. ಅನೇಕರಿಲ್ಲಾಗೂ ಮತ್ತೆ ಅವರ ಜೀವನ ಮಾರ್ಗಕ್ಕೂ ಅವಕಾಶವನ್ನು ಕಲ್ಪಿಸಬೇಕಾಗಿದೆ. ಅದೃಷ್ಟ ಹೀನರಾದ ಈ ಜನರನ್ನು ಉಳಿಸಬೇಕಾದರೆ ತಕ್ಷಣ ಸಹಾಯ ಕ್ರನು ಕೈಕೊಳ್ಳಬೇಕಾಗಿದೆ.

೩. ಇವಕ್ಕಾಗಿ ಸರಕಾರವು ಈ ವರೆಗೆ ರೂ ೧೯,೯೧,೦೦೦ ಗಳನ್ನು ಪ್ರಾಂತೀಯ ನಿಧಿಯಿಂದಲೂ ರೂ. ೩೫,೦೦೦ ಕೃಷ್ಣ ಮತ್ತು ಗೋದಾವರಿ ಸಂರಕ್ಷಣಾ ನಿಧಿಯಿಂದಲೂ ಈ ಕಷ್ಟ ನಷ್ಟಗಳ ನಿವಾರಣೆಗಾಗಿ ಮಂಜೂರು ಮಾಡಿದೆ. ಸರಕಾರವು ಬಡ್ಡಿಯಿಲ್ಲದೆ ಸಾಲವನ್ನೂ ಈ ಕಷ್ಟಕ್ಕೀಡಾದ ರೈತರಿಗೆ ಎತ್ತುಗಳು, ವ್ಯವಸಾಯದ ಹತ್ಯಾರುಗಳು ಇತ್ಯಾದಿಗಳನ್ನು ಕೊಂಡುಕೊಳ್ಳಲು ಮಂಜೂರು ಮಾಡಿ ಆ ಬಗ್ಗೆ ಆಜ್ಞೆಗಳನ್ನು ಹೊರಡಿಸಿರುವರು. ಸಾಧ್ಯವಾದ ಕಡೆಗಳಲೆಲ್ಲಾ ಎಕರೆಯ ಬೆಳೆಯನ್ನು ಬೆಳೆಯಲು ಅನುಕೂಲಿಸುವಂತೆ ಬೀಜ, ಗೊಬ್ಬರ ಮತ್ತು ನೀರು ಸರಬರಾಜು ಮೊದಲಾದವುಗಳ ಅನುಕೂಲತೆ ಒದಗಿಸಲಾಗಿದೆ. ಕೆಳಗೆ ಕಾಣಿಸಿದ ರೂಪಗಳಲ್ಲಿ ಸಹಾಯವು ಕೂಡಲೇ ಬೇಕಾಗಿದೆ.

(೧) ಮನೆಕಟ್ಟುವ ಸಾಮಗ್ರಿಗಳೂ, ಬಟ್ಟೆಗಳು ಮುಖ್ಯವಾಗಿ ಬೇಕಾಗಿವೆ. (೨) ದನಕರುಗಳಿಗೆ ಮೇವು. (೩) ನಷ್ಟಕ್ಕೀಡಾದ ಭೂಮಿಯ ದುರಸ್ತಿ. (೪) ನೆರೆ ಮೊದಲಾದುವುಗಳಿಗೆ ಗುರಿಯಾಗದಂತಿರುವ ಎತ್ತರ ನಿವೇಶನದಲ್ಲಿ ಬಡ ಕುಟುಂಬದವರಿಗೆ ಮನೆಗಳು ಬೇಕಾಗಿವೆ (೫) ಮುಖ್ಯವಾಗಿ ಬೆಸ್ತರಿಗೆ ಬಲೆ ಮತ್ತು ದೋಣಿಗಳೂ, ಬಡ ಕಲ್ಲುಕುಟಿಗರಿಗೆ ಅವರ ಹತ್ಯಾರುಗಳು ಭೂ ವ್ಯವಸಾಯಗಾರರಿಗೆ ಅವರ ಹತ್ಯಾರುಗಳು ಬೇಕಾಗಿವೆ. (೬) ಸಂಪಾದಿಸುವ ಯಜಮಾನನನ್ನು ಕಳೆದುಕೊಂಡಿರುವ ಕುಟುಂಬದವರಿಗೆ ಒಟ್ಟು ದ್ರವ್ಯ ಸಹಾಯ. (೭) ಮುಂದಿನ ಫಸಲು ಬರುವ ತನಕ ಜೀವನ ಮಾರ್ಗ ಕಲ್ಪನೆ (೮) ನಷ್ಟವಾಗಿರುವ ದನಕರುಗಳ ಬದಲು ಪುನಃ ಅವುಗಳನ್ನು ಒದಗಿಸುವುದು.

೪. ಜನರಿಗೆ ಒದಗಿದ ನಷ್ಟದ ಪ್ರಮಾಣಕ್ಕೆ ಸಮನಾಗಿ ಸಾರ್ವಜನಿಕ ಭಂಡಾರದಿಂದ ಸರಕಾರವು ಸಹಾಯವನ್ನು ಒದಗಿಸುವುದು ಸಾಧ್ಯವಾಗಲಾರದೆಂಬುದು ನಿರ್ವಿವಾದವಾಗಿದೆ. ಸಾವಿರಾರು ಸಂಖ್ಯೆಯನ್ನು ಮೀರುವ ಕಷ್ಟನಷ್ಟಗಳನ್ನನುಭವಿಸಿರುವ ಈ ಕುಟುಂಬಗಳವರಿಗೆ ಸರಿಯಾದ ರಕ್ಷಣೆಯನ್ನೊದಗಿಸುವುದು ಖಾಸಗಿ ಜನರ ನೆರವಿಲ್ಲದೆ ಎಂದೂ ಸಾಧ್ಯವಾಗಲಾರದು. ಮದರಾಸಿನ ಮಾನ್ಯ ಗವರ್ನರ್‌ರವರು ನಿರಾಶ್ರಿತರ ಸಹಾಯದ ಬಗ್ಗೆ ಸಹಾಯವನ್ನು ಕೋರಿ ವಿನಂತಿ ಮಾಡಿರುವರು. ಗವರ್ನರ್‌ರವರ ಆಂಧ್ರ ಪ್ರಾಂತ ಸೈಕ್ಲೋನ್ ರೀಲೀಫ್ ನಿಧಿ ಎಂಬ ಹೆಸರಿನಿಂದ ಒಂದು ನಿಧಿ ಈಗಲೇ ಸ್ಥಾಪಿತವಾಗಿದೆ. ಇದು ಪ್ರಾಂತೀಯ ಕ್ಷೇಮ ನಿಧಿಯು ಒಂದು ಅಂಗವಾಗಿದ್ದು ಒಂದು ಪ್ರತ್ಯೇಕ ಸಮಿತಿಯ ಆಡಳಿತಕ್ಕೊಳಪಟ್ಟಿರುವುದು. ಖಾಸಗಿ ಜನರಿಂದ ಹಣವನ್ನು ವಸೂಲು ಮಾಡುವುದಕ್ಕೂ ಮತ್ತು ಪರಿಹಾರವನ್ನು ಒದಗಿಸುವುದಕ್ಕೂ ಎಲ್ಲಾ ಜಿಲ್ಲೆಗಳಲ್ಲೂ ಕವಿಟಿಗಳು ಸ್ಥಾಪನೆಯಾಗಿವೆ. ಸ್ಥಾಪನೆಯಾಗುತ್ತಲೂ ಇವೆ. ಈ ನಿಧಿಗೆ ಇಡೀ ಮದರಾಸು ಆಧಿಪತ್ಯದ ಸಮಸ್ತ ಜನಾಂಗದವರು ಉದಾರ ಹಸ್ತದಿಂದ ಸಹಾಯ ಮಾಡಬೇಕೆಂದು ಮದರಾಸು ಸರಕಾರವು ಈ ಮೂಲಕ ಪ್ರಾರ್ಥಿಸುತ್ತದೆ. ಇದರಿಂದ ಕೂಡಲೇ ಉದ್ದಾರ ಸಹಾಯವು ದೊರೆಯಬಹುದೆಂದು ಅವರು ಭರವಸೆ ಪಟ್ಟಿದ್ದಾರೆ. "ಉದಾರ ಹಸ್ತದಿಂದ ಕೊಟ್ಟ ಸಹಾಯವನ್ನು ಅದು ಎಷ್ಟೇ ಅಲ್ಪವಾಗಿರಲಿ, ಕೃತಜ್ಞತೆಯಿಂದ ಸ್ವೀಕರಿಸಲಾಗುವುದು. ಈ ರೀತಿ ಸಹಾಯ ದ್ರವ್ಯವನ್ನು ಶ್ರೀ ಕೆ. ಎಂ. ರಾಜರತ್ನಂ ಕೋಶಾಧಿಕಾರಿ ಗವರ್ನರ್‌ರವರ ಆಂಧ್ರ ಸೈಕ್ಲೋನ್ ರಿಲೀಫ್ ಸಮಿತಿ C/o ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಫಸ್ಟ್‌ಲೈನ್ ಬೀಚ್, ಮದರಾಸು ಇವರಿಗೆ ಕಳುಹಿಸಬೇಕು. ಸೈಕ್ಲೋನ್ ರೀಲೀಫ್ ನಿಧಿಗೆಂದೇ ಮೀಸಲು ಮಾಡಿದ ಹಣವನ್ನು ಆಯಾಯ ಜಿಲ್ಲೆಗಳ ಸ್ಥಳೀಯ ಕ್ಷೇಮ ನಿಧಿಗಳ ಕೋಶಾಧಿಕಾರಿಗಳಿಗೆ ಕಳುಹಿಸಬಹುದು.

ಸಿ ಟಿ. ಮೊದಲಿಯಾರ್,
ಚೀಫ್ ಕಮಿಷನರವರು.

ಪಿ. ಎನ್. ಕುಮಾರಸ್ವಾಮಿರಾಜ,
ಮದರಾಸಿನ ಮಾನ್ಯ ಮುಖ್ಯ ಮಂತ್ರಿಗಳು

ಹೈಡ್ರೋಜನ್ ಬಾಂಬಿನ ಕುರಿತು

ಪಂಡಿತ್ ನೆಹರುಗಳು ಈ ಕುರಿತು ಪಾರ್ಲಿಮೆಂಟಿನಲ್ಲಿ ಭಾವೋದ್ರೇಕದಿಂದ ಮೊತನಾಡಿದರು. "ಸಭ್ಯವಾದ ಜಗತ್ತಿನಲ್ಲಿ ವಾಸಿಸಬೇಕೆಂದಿದ್ದರೆ ಇಂತಹ ಬಾಂಬಿನ ಅವಶ್ಯಕತೆಯಿಲ್ಲ. ಸಭ್ಯ ಜಗತ್ತು ಬೇಡವೆಂದಾದರೆ ಈಗಲೇ ಇಂತಹ ವಿನಾಶಕಾರಿ ಅಸ್ತ್ರಗಳಿಂದ ಅದನ್ನು ಭಸ್ಮಗೊಳಿಸುವುದು ಒಳಿತು. ಸಭ್ಯತೆಯೂ ಬೇಕು, ಹೈಡ್ರೋಜನ್ ಬಾಂಬೂ ಬೇಕು ಎಂದರೆ ಆಗದು."

ಪ್ರಾಂತಗಳ ಹೆಸರುಗಳ ಬದಲಾವಣೆ

ಪ್ರಜಾಪ್ರಭುತ್ವ ದಿನದಿಂದ ನಾಲ್ಕು ಪ್ರಾಂತ್ಯಗಳ ಹೆಸರುಗಳು ಬದಲಿಸಲ್ಪಟ್ಟಿವೆ. ಯುನೈಟೆಡ್ ಪ್ರಾವಿನ್ಸ್ (ಯು. ಪಿ) ಎಂಬುದು ಉತ್ತರ್ ಪ್ರದೇಶ್ ಯು. ಪಿ. ಆಗಿಯೇ ಉಳಿಯುವುದು. ಪೂರ್ವ ಪಂಜಾಬು ಬೀ ಪಂಜಾಬು ಎಂದು ಕರೆಯಲ್ಪಡುವುದು; ಸೆಂಟ್ರಲ್ ಪ್ರಾವಿನ್ಸ್ ಎಂಬುದು ಮಧ್ಯ ಪ್ರದೇಶ್ ಎಂದಾಗುವುದು. ಅಜ್ಮೀರ್ ಮೂರ್ವಾಡವನ್ನು ಅಜ್ಮೀರ ಎಂದೂ ಕರೆಯಲಾಗುವುದು.

ಸ್ಟೆಲೀನರನ್ನೇ ವಿಚಾರಣೆಗೊಳಮಾಡಬೇಕು.

ಸಂಯುಕ್ತ ಅಮೇರಿಕದ ಯುದ್ಧಾಪರಾಧ ವಿಚಾರಣಾ ಮಂಡಳದ ವಕೀಲರಾದ ಜೋಸೆಫ್ ಕೀನನ್ ಅವರು 'ಇಂದು ದಬ್ಬಾಳಿಕೆಗಾಗಿ ಯಾರನ್ನಾದರೂ ವಿಚಾರಣೆಗೊಳಮಾಡುವುದಿದ್ದರೆ ಸ್ಟೆಲೀನರನ್ನೇ ಮಾಡಬೇಕು' ಎಂದು ತಿಳಿಸಿದರು. ಜಪಾನಿ ಚಕ್ರವರ್ತಿ ಹಿರೋಹಿಟೊರವರನ್ನು ಯುದ್ಧಾಪರಾಧಿಗಳಾಗಿ ವಿಚಾರಣೆಗೊಳಮಾಡಬೇಕೆಂಬ ರಷ್ಯನ್ ಪ್ರಚಾರದ ಕರಿತು ಪ್ರಸ್ತಾಪಿಸುವ ಸಂದರ್ಭದಲ್ಲಿ ಅವರು ಹೀಗೆಂದರು. ಕಳೆದ ಯುದ್ಧದಲ್ಲಿ ಜಪಾನಿಗಳು ರೋಗಾಣು ಯುದ್ಧ ಕ್ರಮವನ್ನು ಅನುಸರಿಸಿದರೆಂದೂ, ಅದರ ಹೊಣೆ ಹಿರೋಹಿಟೊರವರದ್ದೆಂದೂ ರಷ್ಯನರು ಅಪಾದಿಸುತ್ತಿದ್ದರು. ಒರ್ವ ಜಪಾನಿ ಸೈನ್ಯಾಧಿಕಾರಿಗಳು ಈ ಅಪರಾಧ ಯಾರು ಮಾಡಿದರೂ ಚಕ್ರವರ್ತಿಗಳ ಕೈವಾಡ ಅದರಲ್ಲಿ ಏನೂ ಇಲ್ಲವೆಂದೂ ತಿಳಿಸಿದ್ದರು.

ಇಂಗ್ಲೆಂಡಿನ್ನ ಚುನಾವಣೆಗಳು.

ಬ್ರಿಟನಿನ ಪ್ರಕೃತ ಪ್ರಧಾನ ಕ್ಲೆಮೆಂಟ್ ಎಟ್ಲೆಯವರು ಈ ತಿಂಗಳಲ್ಲಿ ನಡೆಯುವ ಅಲ್ಲಿನ ಚುನಾವಣೆಗಳಲ್ಲಿ ಅವರ ಲೇಬರ್ ಪಕ್ಷವು ಬಹುಮತಗಳಿಂದ ವಿಜಯಿಯಾಗುವುದೆಂಬ ಭರವಸೆಯನ್ನು ಒಂದು ಭಾಷಣದಲ್ಲಿ ನಿರೂಪಿಸಿದರು. ಈ ಚುನಾವಣೆಗಳಲ್ಲಿ ಜನರಿಗೆ 'ಸಂಪೂರ್ಣ ಉದ್ಯೋಗದ' ಭರವಸೆ ಕೊಡಲಾಗುವುದೆಂದು ಅವರು ತಿಳಿಸಿದರು. ಚರ್ಚಿಲ್ಲರ ಕುರಿತು ಹೇಳುತ್ತಾ ಎಟ್ಲೆಯವರು "ಅವರು ಐತಿಹಾಸಿಕ ಪುರುಷರಾದರೂ ಅವರ ರಾಜ್ಯಭಾರ ಭಾವನೆಯಲ್ಲಿ ಆರ್ಥಿಕ ವ್ಯವಸೆಗೆ ಸ್ಥಾನವಿಲ್ಲ. ಸಾಮ್ರಾಜ್ಯಶಾಹಿ ಮನೋಭಾವವನ್ನು ಅವರು ಎಂದಿಗೂ ಬಿಡಲಾರರು. ಪ್ರಜಾಪ್ರಭುತ್ವ ಜಗತ್ತಿನಲ್ಲಿ ಅವರಿಗೆ ಸ್ಥಾನವಿಲ್ಲ" ಎಂದರು.

ಕೊಡಗು ಸರಕಾರಿ ಕಾಲೇಜಿನ ಪ್ರಥಮ ವಾರ್ಷಿಕೋತ್ಸವ

ಆಟೋಟಗಳು.

ಸರಕಾರಿ ಕಾಲೇಜಿನ ಪ್ರಥಮ ವಾರ್ಷಿಕೋತ್ಸವವು ತಾರೀಕು ೧೧ ರಲ್ಲಿ ಜರಗಿತು. ಈ ಸಂಬಂಧ ಆಟೋಟಗಳ ಸ್ಪರ್ಧೆಯು ತಾ. ೧೦ ರಲ್ಲಿ ಸ್ಟೇಷನ್ ಕ್ರಿಕೆಟ್ ಗ್ರೌಂಡಿನಲ್ಲಿ ನಡೆಯಿತು. ಪ್ರಥಮ ವರ್ಷದ ತರಗತಿ ಮಾತ್ರವಿದ್ದು ವಿದ್ಯಾರ್ಥಿಗಳ ಸಂಖ್ಯೆ ೧೧೦ ಇರುವದರಿಂದ ಬೇರೆ ಪೂರ್ಣತೆಯನ್ನು ಪಡೆದ ಕಾಲೇಜುಗಳಂತೆ ಆಟೋಟಗಳ ಎಲ್ಲಾ ವಿಷಯಗಳು ಇಲ್ಲದಿದ್ದರೂ ಇದ್ದವುಗಳ ಬಗೆಯೋಗ್ಯ ರೀತಿಯ ಏರ್ಪಾಡುಗಳಾಗಿದ್ದವು. ಆಟೋಟಗಳು ಮುಗಿದ ನಂತರ ಶ್ರೀ. ಕಡೇಮಾಡ ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಲಾಯಿತು. ಹಾಡುಗರ ಪೈಕಿ ಶ್ರೀ. ಎನ್. ಪಿ. ರಾಮಕುಮಾರರವರೂ, ಹುಡುಗಿಯರಲ್ಲಿ ಶ್ರೀಮತಿ ಸಿ. ಕೆ. ಬೋಜಮ್ಮನವರೂ ಛೇಂಪಿಯನ್ ಶಿಪ್ ಕಪ್ಪುಗಳನ್ನು ಪಡೆದರು.

ಪ್ರದರ್ಶನ.

ತಾರೀಕು ೧೧–೨–೫೦ ರಲ್ಲಿ ಕಾಲೇಜು ಆವರಣವು ತಳಿರುತೋರಣಗಳಿಂದ ಅಲಂಕೃತವಾಗಿತ್ತು. ಬೆಳಿಗ್ಗೆ ೯ ಗಂಟೆಯಿಂದ ಮಧ್ಯಾಹ್ನ ೧ ಗಂಟೆಯ ವರೆಗೆ ಪ್ರಕೃತಿಶಾಸ್ತ್ರ, ಫಿಸಿಕ್ಸ್, ಕೆಮಿಸ್ಟ್ರಿ ಮೊದಲಾದ ವಿಭಾಗಗಳ ಪ್ರದರ್ಶನದ ಏರ್ಪಾಡಾಗಿತ್ತು. ಈ ಪ್ರದರ್ಶನಗಳನ್ನು ಸಜ್ಜುಗೊಳಿಸಿ ಪ್ರೇಕ್ಷಕರಿಗೆ ಸುಲಲಿತವಾಗಿ ವಿವರಿಸುವ ಏರ್ಪಾಡು ಮಾಡಿದವರನ್ನು ಹೊಗಳಲೇಬೇಕು. ಈ ಪ್ರದರ್ಶನಗಳು ಬೋಧಪ್ರದವೂ, ವಿಚಿತ್ರಕರವೂ ಮತ್ತು ಮನೋರಂಜಕವೂ ಆಗಿದ್ದವು. ಇವುಗಳನ್ನು ಆಸ್ಥೆಯಿಂದ ಪರಿಶೀಲಿಸಿದ ಕೊಡಗಿನ ಚೀಫ್ ಕಮಿಷನರ ಮೊತಿನಲ್ಲೇ ಹೇಳುವದಾದರೆ "ಈ ಪ್ರದರ್ಶನವು ಅತೀ ಬೋಧಪ್ರದವಾಗಿದೆ. ಇನ್ನೂ ಶೈಶವಾವಸ್ಥೆಯಲ್ಲಿರುವ ನಮ್ಮ ಕಾಲೇಜು ಈ ರೀತಿಯ ಒಂದು ಪ್ರದರ್ಶನವನ್ನು ಏರ್ಪಡಿಸಿದುದು ಸ್ತುತ್ಯಾರ್ಹವಾಗಿದೆ. ಯಾವದೇ ಪ್ರಥಮ ದರ್ಜೆಯ ಕಾಲೇಜೂ ಈ ಪ್ರದರ್ಶನಗಳಿಗಾಗಿ ಹೆಮ್ಮೆ ಪಟ್ಟುಕೊಳ್ಳಬಹುದಿತ್ತು".

ಕಾಲೇಜು ವರದಿ.

ಸಾಯಂಕಾಲ ನಾಲ್ಕು ಗಂಟೆಗೆ ಸಭೆಗೆಂದು ವಿಶಿಷ್ಟವಾಗಿ ಏರ್ಪಡಿಸಿದ್ದ ವೇದಿಕೆಯಲ್ಲಿ ಕೊಡಗಿನ ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ಸಭೆ ಕೂಡಿತ್ತು. 'ಜನಗಣಮನ' ಹಾಡಲ್ಪಟ್ಟ ನಂತರ ಕಾಲೇಜಿನ ಭಾಷಣ, ಲೇಖನ ಮುಂತಿತರ ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಬಹುಮಾನ ಹಂಚಲ್ಪಟ್ಟಿತು. ಕಾಲೇಜಿನ ಪ್ರಿನ್ಸಿಪಾಲರಾದ ಎಂ. ಹೋಲ್‌ಮೆಸ್‌ರವರು ತಮ್ಮ ಸ್ಪಷ್ಟ ಹಾಗೂ ಸರಳ ಮಾತುಗಳಿಂದ ಕಾಲೇಜಿನ ನಿಜಸ್ಥಿತಿಯನ್ನು ಕನ್ನಡಿಯಂತೆ ಎತ್ತಿ ತೋರಿಸುವ ತಮ್ಮ ವರದಿಯನ್ನು ಮುಂದಿಡುತ್ತಾ :–

ಕಾಲೇಜಿನಲ್ಲಿ ನೂರಹತ್ತು ವಿದ್ಯಾರ್ಥಿಗಳಿದ್ದಾರೆ ೯ ಲೆಕ್ಚರರುಗಳೂ ೪ ಡೆಮೊನ್‌ಸ್ಟ್ರೇಟರುಗಳೂ ಇದ್ದಾರೆ. ವ್ಯವಸ್ಥೆಯು ಸಂಗವು ಯೋಗ್ಯ ರೀತಿ ನಡೆಯುವ ಸರ್ವ ಏರ್ಪಾಡುಗಳನ್ನೂ ಕೈಕೊಳ್ಳಲಾಗಿದೆ. ಕಾಲೇಜು ಬೋರ್ಡಿಂಗಿನಲ್ಲಿ ಇರ್ವ ವಿದ್ಯಾರ್ಥಿಗಳಿರಬಹುದಾದರೂ ಈಗ ೩೦ ವಿದ್ಯಾರ್ಥಿಗಳಿದ್ದಾರೆ. ಇವರೇ ತಮ್ಮ ಊಟದ ಏರ್ಪಾಡುಗಳನ್ನು ವಾರ್ಡರುಗಳ ಮೇಲ್ವಿಚಾರಣೆಯಿಂದ ನಡೆಸುತ್ತಾರೆ. ತಿಂಗಳಿಗೆ ವಿದ್ಯಾರ್ಥಿಗೆ ಊಟಕ್ಕೆ ರೂ. ೩೦ ಖರ್ಚಾಗುತ್ತೆ. ಕಾಲೇಜಿನ ವಾಚನಾಲಯಕ್ಕೆ ಪ್ರತ್ಯೇಕ ಕೋಣೆ ಇಲ್ಲ. ಈ ವರ್ಷ ಹತ್ತು ಸಾವಿರ ರೂಪಾಯಿಗಳ ಪುಸ್ತಕ ತರಿಸಲಾಗುವದು. ಆಟೋಟಗಳಿಗಾಗಿ ವಿದ್ಯಾರ್ಥಿಗಳಿಂದ ಬಂದುದಕ್ಕಿಂಥಾ ಹೆಚ್ಚಾಗಿ ಖರ್ಚಾಗಿದೆ. ಇನ್ನೂ ಎಲ್ಲಾ ರೀತಿಯ ಆಟಗಳ ವ್ಯವಸ್ಥೆಯೂ ಆಗಿಲ್ಲ. ಕಾಲೇಜಿನ ಲೇಬರೇಟರಿಗಾಗಿ ೯೦,೦೦೦ ರೂ ಈ ವರ್ಷ ಖರ್ಚಾಗುವದು. ಅತ್ಯವಶ್ಯ ಬೇಕಿರುವ 'ಗೇಸ್‌ಪ್ಲಾಂಟ್' ಇನ್ನೂ ದೊರೆತಿರುವದಿಲ್ಲ. ಈಗಿರುವ ಕಟ್ಟಡದಲ್ಲಿ ಸ್ಥಳದ ಅಭಾವವಿದೆ. ಒಂದೆರಡು ಕೋಣೆಗಳು ಕಟ್ಟಲ್ಪಡುತ್ತಿವೆ. ಮರವಮಟ್ಟು ಸಾಮಾನುಗಳು ಇನ್ನೂ ಪೂರ್ತಿಯಾಗಿಲ್ಲ. ಕಾಲೇಜು ಕಟ್ಟಡದ ಪ್ಲಾನನ್ನು ಪರಿಶೀಲಿಸಿ ಕಳುಹಿಸಲಾಗಿದೆ. ಶೀಘ್ರ ಕಟ್ಟಡ ಆಗುವ ಭರವಸೆ ಇದೆ. ಸಾರ್ವಜನಿಕರ ಬೆಂಬಲವು ಅತ್ಯಗತ್ಯ. ಚೀಫ್ ಕಮಿಷನರು ಈ ಕಾಲೇಜಿಗಾಗಿ ಪ್ರಯತ್ನ ಪಟ್ಟಿದ್ದಾರೆ. ಅವರಿಂದಲೇ ಈ ಕಾಲೇಜಾಯಿತು ಎನ್ನಬಹುದು. ಕಾಲೇಜಿಗೆ ಉದಾರವಾಗಿ ಸುಮಾರು ೩೦,೦೦೦ ರೂಪಾಯಿ ಹಣ ಬಂದಿದೆ. ಇದನ್ನು ಕೊಟ್ಟವರ ಆಶೆಯಂತೆ ಇದನ್ನು ನಿಕ್ಷೇಪವಾಗಿರಿಸಿ ಇದರ ಬಡ್ಡಿಯಿಂದ ಯೋಗ್ಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ಏರ್ಪಾಡು ಮಾಡಲಾಗುವದು. ಸಾರ್ವಜನಿಕ ಸಹಾಯ ಎಲ್ಲಾ ವಿಧದಿಂದಲೂ ಬೇಕು.

ಟೋಸ್ಟ್.

ಕೊಡಗು ಜಿಲ್ಲಾ ವಿದ್ಯಾಧಿಕಾರಿಗಳಾಗಿರುವ ಶ್ರೀ ಬಿದ್ದಂಡ ಕುಶಾಲಪ್ಪನವರು ಕಾಲೇಜಿನ ಪರ 'ಟೋಸ್ಟ್'ನ್ನು ಸೂಚಿಸಿ ಮಾತಾಡಿದರು. ಈ ಕಾಲೇಜು ಸ್ಥಾಪನೆಯಾಗಲು ಚೀಫ್ ಕಮಿಷನರಾದ ಶ್ರೀ ಸಿ. ಟಿ. ಮೊದಲಿಯಾರರ ಅವಿಚಲ ಪ್ರಯತ್ನವೇ ಕಾರಣ. ಅವರು ಈ ಕಾಲೇಜಿನ ಸಂಸ್ಥಾಪಕರೆನ್ನಬಹುದು. ವಾಸ್ತವವಾಗಿ ಇದು ಅವರ ಕಾಲೇಜು. ಈ ಕಾಲೇಜು ಯೋಗ್ಯ ದಾರಿಯಲ್ಲಿ ಮುಂದರಿಯುತ್ತಿದೆ. ಮಿ. ಹೋಲ್‌ಮೆನರಂಥಾ ದಕ್ಷ ಪ್ರಿನ್ಸಿಪಾಲರಾಗಿ ಈ ಕಾಲೇಜಿಗೆ ಒದಗಿಸಿದ ಕೀರ್ತಿಯೂ ಚೀಫ್ ಕಮಿಷನರಿಗೆ ಸಲ್ಲಬೇಕು. ಪ್ರಿನ್ಸಿಪಾಲರು ಕಾಲೇಜನ್ನು ದಿನ ದಿನಕ್ಕೆ ಮೇಲೆ ತರುತ್ತಿದ್ದಾರೆ. ಇವರ ಮೇಲ್ವಿಚಾರಣೆಯಲ್ಲಿ ಈ ಕಾಲೇಜು ಆದರ್ಶ ಕಾಲೇಜಾಗುವದರಲ್ಲಿ ಸಂಶಯವಿಲ್ಲ. ಕೊಡಗಿನಲ್ಲಿ ಕಾಲೇಜೇಕೆ? ಹೊರಪ್ರಾಂತಗಳ ಸಂಬಂಧವಿಲ್ಲದೆ ಕೊಡಗಿನ ಕಾಲೇಜು ಸಂಕೀರ್ಣತೆಯಲ್ಲಿ ಮುಳುಗಿ ಕೂಪಮಂಡೂಕ ಪ್ರವೃತ್ತಿಯು ಹೆಚ್ಚಿ ವಿದ್ಯಾರ್ಥಿಗಳ ವಿಕಾಸಕ್ಕೆ ಎಡೆಯೊಗಲಾರದೆಂದು ಕೆಲವರು ಹೇಳುವದಿದೆ. ಆದರೆ ಈಗಿನ ಸೋರಣೆಯನ್ನು ಪರಿಶೀಲಿಸಿದರೆ ವಿದ್ಯಾಭ್ಯಾಸವು ಹೆಚ್ಚಾಗಿ ನಗರಪ್ರದೇಶಗಳಿಗೊಂದಲದಲ್ಲಿ ಕೇಂದ್ರೀಕೃತವಾಗಿಲ್ಲಿಯು ನೈಸರ್ಗಿಕ ವಾತಾವರಣದಲ್ಲಿರುವದು ತಿಳಿಯುವದು. ಹಿಂದುಳಿದ ಕುಲ ವಿದ್ಯಾಭ್ಯಾಸವು ಆ ರೀತಿ ತು. ಈ ತಳಹದಿಯಲ್ಲಿಯೇ ರಘುನಾಥ ರಾಗೋರರು ಶಾಂತಿನಿಕೇತನ, ವಿಶ್ವಭವನಗಳನ್ನು ಕಟ್ಟಿದ ಗೂರದ ಹಳ್ಳಿಯಲ್ಲಿ ಸ್ಥಾಪಿಸಿದ್ದರ್ಶನ ಮಾಡಿರುವರು. ಆದ್ದರಿಂದ ಕೊಡಗು ಕಾಲೇಜಿಗೆ ಮೂದರಿ ಪ್ರದೇಶಕಾಲೇಜು ಕಟ್ಟಡದ ಪ್ಲಾನು ಕ್ಕರವಾಗಿ ಕಾಲೇಜು ಕಟ್ಟಲು ಅನುಮತಿ ಕೇಂದ್ರದಿಂದ ದೊರೆತಿರುವದನ್ನೂ ಹೃದಯದ ಮೇಲಿದ್ದ ಭಾರವು ಕರವಾಯಿತು. ಇನ್ನು ಕಾಲೇಜು ಕಟ್ಟಡ ಬೇಗ ಆಗಬಹುದು.

ಈ ಸಂದರ್ಭದಲ್ಲಿ ಕಾಲೇಜಿನ ವಿದ್ಯಾರ್ಥಿಗಳ ಬಗ್ಗೆ ಒಂದೆರಡು ಮಾತು ಳದಿದ್ದರೆ ನನ್ನ ಕರ್ತವ್ಯ ಮಾಡಿದಂತಾಗದು. ಜೀವನಮಾರ್ಗದಲ್ಲಿ ಯೋಗ್ಯತೆ ಮುಂದರಿಯಲು ಶಿಸ್ತು ಬೇಕು. ಕಾಲೇಜಿನ ಜೀವನದಲ್ಲಿ ಶಿಸ್ತಿರಲಿ. ಪರಿಪಬ್ಲಿಕ್ ದಿನದಂದು ಕೆಲವು ಮೇಲೆ ಸಾರ್ವಜನಿಕ ಸ್ಥಳದಲ್ಲಿ ಅವಮಾನ ಮಾಡಿದ ಪ್ರಸಂಗ ನನಗೆ ಬಾ ವ್ಯಸನವನ್ನುಂಟುಮಾಡಿದೆ. ಕಾಲು ವಿದ್ಯಾರ್ಥಿಗಳು ಅದನ್ನು ಮಾಡಿದರು. ಅದರಿ ಆ ರೀತಿಯ ವರ್ತನೆ ರಿಗೂ ಭೂಷಣವಲ್ಲ. ಇನ ಕಾಲೇಜು ವಿದ್ಯಾರ್ಥಿಗಳೆ ನಾಳಿನ ಡಳಿತಗಾರರು. ಯಾರಿಗೆ ಗೊತ್ತು ನಿವಲ್ಲಿ ಪಠೇಲರು, ನೆಹರೂಗಳು ಇರಬಹುದು ಅಂಥಾ ಬೆಳವಣಿಗೆಗೆ ಅಪಕಾಶಕೊಟ್ಟು ಸ್ತಿನಿಂದ ನಡೆದು ಕಾಲೇಜಿಗೆ ಕೀರ್ತಿ ನ್ನಿರಿ.

ಉತ್ತರ

'ಟೋಸ್ಟಿ'ಗೆ ಉತ್ತರವೀಯುತ್ತಾ ಕಾಲೇಜ್ ಯೂನಿಯನ್ ನಿನ ಕಾರ್ಯದರ್ಶಿಗಳಾದ ಶ್ರೀ ಎಂ. ಎಂ. ಪೂಣಚ್ಚನವರು ಭಾಷಣಕಾರರ ಬೋಧಪ್ರದವೂ, ನೀತಿಯುಕ್ತವೂ ಆದ ಮಾತುಗಳಿಗೆ ವಂದಿಸಿದರು. ಕೊಡಗಿನಲ್ಲಿ ಕಾಲೇಜಾಗಿ, ಹೋಲ್‌ಮೆನರಂಥಾ ದಕ್ಷ ಪ್ರಿನ್ಸಿಪಾಲರನ್ನೂ ಕರ್ತವ್ಯ ದುರಂಧರರಾದ ಲೆಕ್ಚರರುಗಳನ್ನೂ ಪಡೆದ ತಮ್ಮ ಸೌಭಾಗ್ಯವನ್ನು ಹೇಳಿದರು. ವಿದ್ಯಾರ್ಥಿಗಳಾದ ತಾವು ಈ ಕಾಲೇಜಿನ ಕೀರ್ತಿಯನ್ನು ಎಂದೂ ಹಾಳುಮಾಡೆವೆಂದೂ, ಬದಲು ಮುಂಬರುವ ವಿದ್ಯಾರ್ಥಿಗಳಿಗೆ ಆದರ್ಶ ಪಥದ ಪರಿಚಯ ಮಾಡಿ ಕೊಡುವದಾಗಿಯೂ ಹೇಳಿದರು. ಅಂದು ನಡೆದ ಸಾರ್ವಜನಿಕ ಅವಮಾನದ ವಿಚಾರಕ್ಕೂ ಕಾಲೇಜು ವಿದ್ಯಾರ್ಥಿಗಳಿಗೂ ಯಾವುದೇ ಸಂಬಂಧವಿಲ್ಲವೆಂದೂ ತಿಳಿಸಿದರು. ಕಾಲೇಜಿನ ಪ್ರಗತಿಯಾಗಲು ಸಾರ್ವಜನಿಕರ ಸಹಾಯವು ಅಗತ್ಯವೆಂದರು. ಭಾಷಣಕಾರರನ್ನು ಹೃತ್ಪೂರ್ವಕ ವಂದಿಸಿದರು.

ಅಧ್ಯಕ್ಷ ಭಾಷಣ.

ಚೀಫ್ ಕಮಿಷನರಾದ ಶ್ರೀ ಸಿ. ಟಿ ಮೊದಲಿಯಾರ್‌ರವರು ತಮ್ಮ ಅಧ್ಯಕ್ಷ ಭಾಷಣ ಮಾಡುತ್ತಾ ಹೀಗೆ ಹೇಳಿದರು ನಾನು ಕೊಡಗಿಗೆ ಬರುವಾಗಲೇ ಕೊಡಗಿನ ಜನತೆಯು ಕಾಲೇಜಿಗಾಗಿ ಪಡುತ್ತಿದ್ದ ಪ್ರಯತ್ನದ ಅರಿವಿತ್ತು. ಜನತೆಯ ಬೆಂಬಲ ಮತ್ತು ಪ್ರಯತ್ನವೇ ಈ ಕಾಲೇಜಿನ ಆಸ್ತಿತ್ವಕ್ಕೆ ಮುಖ್ಯ ಕಾರಣ. ಆದ್ದರಿಂದ ಕಾಲೇಜಾದುದಕ್ಕೆ ಯಾರನ್ನಾದರೂ ಪ್ರಶಂಸಿಸಬೇಕಿದ್ದರೆ ಅದು ಕೊಡಗಿನ ಜನತೆಯನ್ನು! ಕಾಲೇಜು ಸ್ಥಾಪಿಸಲು ಮುಂಚೆ ಬಂದಿದ್ದ ಸೈಂಟ್ ಫಿಲೋವಿನಾ ವೀಶಿನಿನವರೆಗೆ ಸರ್ವ ಸಹಾಯವನ್ನೂ ಕೊಡುವ ಏರ್ಪಾಡನ್ನು ಸರಕಾರವು ಮಾಡಿತ್ತು. ಆದರೆ ವೀಶಿನಿನವರು ಆ ಸಮಯದಲ್ಲಿ ತಾವು ಈ ಜವಾಬ್ದಾರಿಯನ್ನು ಕೈಕೊಳ್ಳಲಾರೆವೆಂದು ನಿರಾಕರಿಸಿದ್ದರಿಂದ ನನ್ನ ಮೇಲೆ ದೊಡ್ಡ ಭಾರ ಬಿತ್ತು. ಅದು ಒಳ್ಳೆಯದಕ್ಕೇ ಎನ್ನಬಹುದು. ಕೊಡಗಿನ ಕಾಲೇಜು ವೀಶಿನರಂಯ ಪಾಠಗಾಲೇಜಾಗುವ ಬದಲು ಸರಕಾರಿ ಅರ್ಥಾತ್ ಜನತೆಯ ಕಾಲೇಜಾಯಿತು.

ಕಾಲೇಜಿನ ಕಾರ್ಯಕಲಾಪಗಳು ತೃಪ್ತಿಕರವಾಗಿ ನಡೆಯುತ್ತಿವೆ. ಇದಕ್ಕಾಗಿ ಪ್ರಿನ್ಸಿಪಾಲರನ್ನೂ ಅವರ ಸಿಬ್ಬಂದಿಯನ್ನೂ ಪಂದಿಸಬೇಕಾಗಿದೆ. ಅವರು ದಿನ ಏರ್ಪಡಿಸಿರುವ ಪ್ರದರ್ಶನವು ಹೊಳಲರ್ಹವಾಗಿದೆ. ನಾನಾ ಭಕ್ಷಕ ಗಳೂ ಇರುವದು ನನಗೆ ಆಶ್ಚರ್ಯನ್ನುಂಟುಮಾಡಿತು. ಮುಂದಯು ಬೆಳೆದೊಡ್ಡದಾಗುವ ವರೆಗೆ ಬಾಯಿಯಲ್ಲಿಯೆ ಮುರಿಯನ್ನಿಟ್ಟ ಉತ್ಸವಸವಿದ್ದು ವಯನ್ನು ಪೋಷಿಸುವ ಮಾನಸ್ಸನ್ನು ನೆನೆ ಮಾತೃಪ್ರೇಮದ ಅಗಾಧ ತ್ಯಾಗದ ಪರಯವಾಯಿತು.

ಕಾಲೇಜು ಕಟ್ಟಡ ಕಟ್ಟುವ ಅನುಮತಿ ಬಂದಿದೆ. ಮುಂದಿನ ತಿಂದ ಕಟ್ಟಡ ಕೆಲಸ ಪ್ರಾರಂಭವಾಗಿಂದು ಹೇಳಲು ಸಂತೋಷವಾಗುತ್ತ ಇದನ್ನು ಅಂದಾಜು ಮಾಡುವ ಕೆಸಿ. ಡಬ್ಲ್ಯೂ ಡಿಯವರು ಜರುವೆ ವಕ್ಕೆ ಕಟ್ಟಡ ಕೆಲಸ ವಹಿಸಿಕೊಡುವ ರಸೆ ಹೇಳಿದ್ದಾರೆ. ಇತ್ತಲಾಗಿ ಕೇರಕಾರದ ವಿದ್ಯಾ ಇಲಾಖಾ ಸೂಯಂತೆಯೂನಿವರ್ಸಿಟಿಯವರು ಕೆನ ಶೈಕ್ಷಣಿಕ ಲುಗಳಲ್ಲಿ ಒಂದನ್ನು ಸ್ಥವಿಡಿಯೇಟ್ ಕಾಲೇಜಿನ ಅಂವಿರಿಸುವ ಸಾಧ್ಯತೆ ಇದೆ. ಅದ್ದರಿಂದು ಫರ್ಸ್ಟ್‌ಗ್ರೇಡ್ ಕಾಲೇಜಾಗಿ ದ ಕೊಡಗಿನಲ್ಲಿ ಒಂದಕ್ಕಿಂಥಾ ಹೆಕಲೇಜಾಗುವ ಸಂದರ್ಭವಿದೆ.

ಈ ಕಾಲೇಜಿನ ಹೊಸ ಕಟ್ಟಡವನ್ನು ನಾನು ಕಾಣಲಾರೆ. ನಾ ಎಲ್ಲಿಯೇ ಇರಲಿ, ಈ ಕಾಲೇಜಿಗ ಗಿ. ಡಗ ನಾಡಿಗಾಗಿ ನನ್ನ ಮನವು ಈ ಸದ ಹಂಯುತ್ತಿರುವದು. ನಮ್ಮ ಕಾಲೇಜಿಗೂ, ಕಾಲೇಜಿನ ವಿದ್ಯಾರ್ಥಿಗೂ ಕೊಡಗಿನವರೆಲ್ಲರಿಗೂ ದೇವನು ಭವನ್ನು ಕೊಡಲಿ.

(೬ನೇ ಪುಟಕ್ಕೆ ಸಾಗಿದೆ.)

ಕೊಡಗು

ತಾ. ೧೭–೨–೧೯೫೦ನೇ ಶುಕ್ರವಾರ

ಕಾಲೇಜ್ ಡೇ.

ಕೊಡಗು ಸರಕಾರಿ ಕಾಲೇಜಿನ ವಾರ್ಷಿಕೋತ್ಸವವು ಮೊನ್ನೆ ಯಶಸ್ವಿಯಾಗಿ ನಡೆಯಿತು. ಕಾಲೇಜಿನ ಕಾರ್ಯಕಲಾಪದ ಬಗ್ಗೆ ಜನತೆಗೆ ತೃಪ್ತಿಕರವಾಗುವ ರೀತಿಯ ಮಾಹಿತಿ ದೊರೆಯಿತು. ಸರಳ ಮತ್ತು ಕಾರ್ಯದಕ್ಷರಾದ ಪ್ರಿನ್ಸಿಪಾಲರೂ, ಯೋಗ್ಯ ಮತ್ತು ಕರ್ತವ್ಯನಿರತ ಲೆಕ್ಚರರುಗಳೂ ಕಾಲೇಜಿಗೆ ಗೌರವ ತಂದಿದ್ದಾರೆ. ಆದರೆ ಈ ಕೇವಲ ಹತ್ತು ತಿಂಗಳುಗಳ ಕಾರ್ಯಕಲಾಪಗಳಿಂದ ಕಾಲೇಜಿನ ಪ್ರಗತಿಯನ್ನು ಮತ್ತು ಪಾಠ ಪ್ರವಚನಗಳ ಯೋಗ್ಯತೆಯನ್ನು ಅಳೆಯುವುದು ಅಪ್ರಸಂಗಿಕವಾಗಬಹುದಾದರೂ ಈವರೆಗಿನ ಕಾರ್ಯಕಲಾಪಗಳು ಮುಂದಿನ ಯೋಗ್ಯ ಭವಿಷ್ಯಕ್ಕೆ ಸಾಂಕೇತಿಕವಾಗಿ ಇವೆ. ಈ ಅನುಭವದಿಂದ ಕಾಲೇಜು ಈ ದಕ್ಷ ಆಡಳಿತಗಾರರ ಕೈಯಲ್ಲಿ ಯೋಗ್ಯ ಪಥದಲ್ಲಿ, ಕೀರ್ತಿಗಳಿಸುತ್ತಾ ಮುಂದುವರಿಯುವುದೆಂದು ನಂಬಬಹುದಾಗಿದೆ.

ಕಾಲೇಜಿನ ಉನ್ನತಿಯೂ ಆವನತಿಗೆ ಅಧ್ಯಾಪಕ ವರ್ಗವೇ ಸರ್ವಸ್ವವಲ್ಲ. ಸಾರ್ವಜನಿಕರ ಹೃತ್ಪೂರ್ವಕ ಬೆಂಬಲ ಬೇಕು. ಅದರೊಂದಿಗೆ ವಿದ್ಯಾರ್ಥಿಗಳೂ ತಮ್ಮ ಜವಾಬ್ದಾರಿಯನ್ನರಿತು ಕಾಲೇಜಿಗೆ ಕಳಂಕ ಬಾರದಂತೆ ವರ್ತಿಸಬೇಕು. ಶಿಸ್ತು ಸಂಘಟನೆ ಇತರೆಡೆ ಪಥಪಡೆದು ವಿದ್ಯಾರ್ಥಿಗಳು ವರ್ತಿಸುವುದಾದರೆ ಅವರ ಜೀವನವೂ ಭವ್ಯವಾಗುವುದಲ್ಲದೆ ಕಾಲೇಜಿನ ಕೀರ್ತಿಯೂ ಹೆಚ್ಚುವುದು. ಅಧ್ಯಾಪಕರು, ವಿದ್ಯಾರ್ಥಿಗಳು, ಸಾರ್ವಜನಿಕರು ಕಾಲೇಜನ್ನು "ನಮ್ಮದೆ"ಂದು ಭಾವಿಸಿ ವರ್ತಿಸಿದರೆ ಈ ಕಾಲೇಜು ಅಪೂರ್ವ ಕಾಲೇಜಾಗುವುದರಲ್ಲಿ ಆಶ್ಚರ್ಯವಿಲ್ಲ.

ಕಾಲೇಜಿನ ಕಟ್ಟಡಕ್ಕೆ ಅನುಮತಿ ದೊರೆತ ಶೀಘ್ರ ಕೆಲಸ ಕೈಕೊಳ್ಳಲ್ಪಡುವ ದೆಂಬುದು ಸಂತೋಷದ ವಿಚಾರ. ವಿಶ್ವವಿದ್ಯಾಲಯದ ನಿಯಮದಲ್ಲಿ ೧೯೫೧ರೊಳಗೆ ಕಾಲೇಜು ಕಟ್ಟಡವಾಗದಿದ್ದರೆ ವಿಶ್ವವಿದ್ಯಾಲಯದ ಸಂಯೋಜನೆಯು ತಪ್ಪುವ ದೆಂದು ತಿಳಿದು ಬಂದಿದೆ. ಆದ್ದರಿಂದ ೧೯೫೧ನೇ ಕಾಲೇಜು ವರ್ಷ ಪ್ರಾರಂಭವಾಗುವವರೊಳಗೆ ಕಟ್ಟಡ ತಯಾರಾಗಬೇಕು. ಇದಕ್ಕೆ ಮಹಾ ಪ್ರಯತ್ನವೇ ನಡೆಯಬೇಕಾಗುವದು. ಪಿ. ಡಬ್ಲ್ಯೂ. ಡಿ. ಯವರು ಕಟ್ಟಡ ಕಟ್ಟಿಕೊಡುವ ಭರವಸೆ ಕೊಟ್ಟಿರುವರೆಂದು ಚೀಫ್ ಕಮಿಷನರು ಹೇಳಿದ್ದರೂ ಇದನ್ನು ಸಾಧಿಸಲು ಈಗಲೇ ವಿಶ್ವಯತ್ನ ಮಾಡಬೇಕು. ಸರಕಾರವು ಶೀಘ್ರ ಈ ಕಾರ್ಯವನ್ನು ಕೈಕೊಂಡು ಅಕಾಲದಲ್ಲಿ ಕಟ್ಟಡ ಕಟ್ಟಿ ಕಾಲೇಜನ್ನು ಭವ್ಯ ಹಾಗೂ ಶಾಶ್ವತ ತಳಹದಿಯಲ್ಲಿ ನಿಲ್ಲಿಸುವದೆಂದು ಆಶಿಸಲಾಗಿದೆ.

ಮಡಿಕೇರಿ.

ಕೆ. ಬಿ. ಆರ್. ಸರ್ವಿಸು ಲೈನಿನಲ್ಲಿ ಮೊನ್ನೆ ಭಾನುವಾರ ಬೆಳಿಗ್ಗೆ ಮೈಸೂರಿನಿಂದ ಹೊರಟ್ಟಕೊಪ್ಪಲು ಮಾರ್ಗವಾಗಿ ಮಧ್ಯಾಹ್ನ ೨–೩೦ ಗಂಟೆಗೆ ಬೀ ರಾಜಪೇಟೆ ಮಧ್ಯಾಹ್ನ ೧೨–೩೦ ಗಂಟೆಗೆ ಬೀಟಿಯಿಂದ ಹೊರಟು ಸಾಯಂಕಾಲ ೪ ಗಂಟೆಗೆ ಮೈಸೂರಿಗೆ ತಲಪುವಂತೆ ಆಗಿದೆ.

ಕಣಿವೆಮೈಸೂರು ಲೈನಿನ ಕೆ. ಬಿ. ಮೋ ಸರ್ವಿಸು ತಾತ್ಕಾಲಿಕವಾಗಿ ಜೀ ಅಭಾವದಿಂದ ಏಪ್ರಿಲ್ ಒಂದರವರೆಗಿನೇರಿಯಲ್ಲೇ ನಿಲ್ಲುವ ವ್ಯವಸ್ಥೆಯೆಂದು ತಿಳಿದುಬರುತ್ತೆ.

ಕೆಫೆಟೇರಿಯಾ ಕಮಿಟಿ ವಿಾಟಿಂಗು ೧೮–೨–೫೦ ರಲ್ಲಿ ಕೊಡಗು ಕೌನ್ಸಿಲಿನಲ್ಲಿ ನಡೆಯುವುದು.

ಕೌನ್ಸಿಲು ವಿಾಟಿಂಗಿನಲ್ಲಿ ಅರಿಸಲ್ಪಟ್ಟರಿ ಕಂದಾಯ ಮಹಜೆಯು ಸಿಲೆಕ್ಟ್ ಕಮಿಟಿಯ ವಿಾಟಿಂಗು ತಾರೀಕು ೨೫–೨ ರಲ್ಲಿ ಕೌನ್ಸಿಲು ಹಾಲಿನಲ್ಲಿ ನಡೆಯುವು.

ರಾಜಪೇಟೆ ಗವರ್ನಮೆಂಟ್ ಹೈ ಸ್ಕೂಲಾರ್ಷಿಕೋತ್ಸವವು ವೈಸೂರು ಮಹಾರಾಜ ಕಾಲೇಜಿನ ಇಂಗ್ಲಿಷ್ ಪ್ರೊಫೆಸರ್ ಶ್ರೀ ಎಸ್. ವಿ ರಂಗಣ್ಣನವರ ಆಧ್ಯಕ್ಷತೆಯಲ್ಲಿ ನಡೆಯಲಿದೆ.

೨೬–೨–೫೦ ರಲ್ಲಿ ಮಡಿಕೇರಿ ಕೂ ಹಾಲ್‌ನಲ್ಲಿ ಅಖಿಲ ಕೊಡಗು ಮಸಿಪಾಯಿಯರ ಮಹಾಸಭೆಯು ಕೆ. ಚೀಫ್ ಕಮಿಷನರ ಅಧ್ಯಕ್ಷತೆಯನಡೆಯುವುದು. ಕೊಡಗಿನ ಮೂಜಿಯಿಗಳ ಟ್ರಾನ್ಸ್‌ಪೋರ್ಟ್ ಸಂಘವನ್ನು ತೆರೆಯುವ ವಿಚಾರ ಅಲ್ಲಿ ಚರ್ಚೆಗೆ ಬರುವುದೆಂದು ತಿಳಿದುಬಂದಿದೆ.

ಸ್ಪೆನ್ಸರ್‌ದಿಂದ ಬಿಡುಗಡೆ ಹೊಂದಿದ ಎ. ಎಸ್. ಎಲ್. ಸಿ. ಪಾಸಾದ ೩೦ ಮಂದಿಯೊಳಗಿನ ಯೋಗ್ಯ ಯುವಕರಿಗೆ ದ್ಯಾಸಿನಲ್ಲಿ ಫಿಟ್ಟಿಂಗ್ ಟ್ರೈನಿಂಗ್ ಇನ್‌ಸ್ಟ್ರಕ್ಟರ್ ತರಬೇತು ಕೊಡುವ ಏರ್ಪಾಡು ಮಾಡಲಾಗುವದೆಂದೂ ಹೆಚ್ಚಿನ ವಿವರಗಳಿಗೆ ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿಗೆ ಬರಕೊಳ್ಳಬಹುದಾಗಿಯೂ ತಿಳಿಸುತ್ತಾರೆ.

ಶ್ರೀಮತಿ ಕಾಬೀರಂಡ ತಿಮ್ಮಯ್ಯ ಮೆಮೋರಿಯಲ್ ಬ್ಯಾಡ್‌ಮಿಂಟನ್ ಪಂದ್ಯಾಟವು ತಾ. ೩–೩–೫೦ ರಿಂದ ಸಿದ್ದಾಪುರ ಕ್ಲಬ್ಬಿನ ಆಶ್ರಯದಲ್ಲಿ ಜರುಗುವದು.

ಚಿಕ್ಕಮಗಳೂರಿನ ಇಂಟರ್‌ಮೀಡಿಯೇಟ್ ಕಾಲೇಜಿನ ವಾರ್ಷಿಕೋತ್ಸವ ಸಂದರ್ಭದಲ್ಲಿ ಶ್ರೀ ಪುಲಿಯಂಡ ಜಿ. ಸೀತಾರಾಮಯ್ಯನವರು ಒಂದು ಮೈಲು, ೧೦೦ ವಿಾಟರ್ ಓಟ, ಉದ್ದ ಮತ್ತು ಎತ್ತರ ಹಾರುವವರಲ್ಲಿ ಬಹುಮಾನಗಳನ್ನು ಪಡೆದು ಭಾರಿ ಪಿಟಾನ್ ಶಿಸ್ ಕಪ್ಪನ್ನೂ ಗೆದ್ದರು.

ಯು. ಪಿ. ವರ್ಯಾದ ಇಂಡೆಪೆಂಡೆಂಟ್ ಸಿಗ್ನಲ್ ಕೋರ್‌ನಲ್ಲಿರುವ ಶ್ರೀ ಎಂ. ಎಂ. ಅಪ್ಪಯ್ಯನವರು ಅಲ್ಲಿ ನಡೆದ ಇಂಟರ್ ಸ್ಕೋರ್ಟ್ಸ್ ಆಟೋಟಗಳಲ್ಲಿ ಭಾಗವಹಿಸಿ ಸ್ಪರ್ಧಿಸಿ ಪದಕವನ್ನು ಪಡೆದು ಆ ವರ್ಷದ ೧೯೫೦ ಉತ್ತಮ ಯುವಕ (Best athlete for 1950) ಎನಿಸಿರುವರು.

ಮೈಸೂರು ಸ್ಟೇಟ್ ಒಲಂಪಿಕ್ ಪಂದ್ಯಾಟದಲ್ಲಿ ಭಾರದ ಕಲ್ಲೆಸೆಯುವವರಲ್ಲಿ ಶ್ರೀ ಕೋದಾಂಡ ಎ. ಬೋಪಯ್ಯನವರು ಪ್ರಥಮ ಬಹುಮಾನ ಪಡೆದಿರುವರು.

ಕಳೆದ ಎಸ್. ಎಸ್. ಎಲ್. ಸಿ. ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಶ್ರೀಮತಿ ಪುಟ್ಟಿಚಂಡ ಬೊಳ್ಳಮ್ಮನವರು ತೇರ್ಗಡೆಯಾಗಿರುವರು.

ಕೊಡಗಿನ ಚೀಫ್ ಕಮಿಷನರಾಗಿ ನೇಮಕವಾಗಿರುವ ಆಸ್ಟ್ರೇಲಿಯಾದ ಹೈ ಕಮಿಷನರಾಗಿದ್ದ ಲೆ|| ಕರ್ನಲ್ ದಯಾ ಸಿಂಗ್ ಬೇಡಿಯವರು ಫೆಬ್ರವರಿ ತಾ. ೨೪ ರಲ್ಲಿ ಆಸ್ಟ್ರೇಲಿಯಾದಿಂದ ಬರಲಿರುವರು. ಮಾರ್ಚಿ ತಾರೀಕು ಪ್ರಥಮ ವಾರದಲ್ಲಿ ಅವರು ಕೊಡಗಿಗೆ ಬರಬಹುದೆಂದು ವಾರ್ತೆ ಇದೆ.

ವಾರ್ತೆಗಳು.

ಪಾಕಿಸ್ತಾನದ ಮುಖ್ಯ ಮಂತ್ರಿ ಲಿಯಾಖತ್ ಆಲಿಖಾನರು ನೇ ತಾರೀಕು ೩ ರಲ್ಲಿ ಅಮೇರಿಕಾಕ್ಕೆ ಹೋಗಿ ೪೪ ದಿನಗಳ ವರೆಗೆ ಅಮೇರಿಕಾದ ಆಮಂತ್ರಣದ ಮೇರೆ ಪ್ರವಾಸ ಮಾಡುವರೆಂದು ತಿಳಿದು ಬಂದಿದೆ.

೧೯೫೦ ರಲ್ಲಿ ಬ್ರಿಟನಿನ ರಾಜರಾದ ಜಾರ್ಜರವರು ಪತ್ನಿ ಸಮೇತ ನ್ಯೂಜಿಲೇಂಡನ್ನು ಸಂದರ್ಶಿಸುವರೆಂದು ತಿಳಿಯ ಒಂದಿದೆ.

ಹಿಂದೂದೇಶದಲ್ಲಿ ಆಹಾರ ಪದಾರ್ಥಗಳ ಸಂಗ್ರಹ (ಪ್ರೊಕ್ಯೂರ್‌ಮೆಂಟ್) ಸರಿಯಾಗಿ ಆಗುವಂತೆ ನೋಡಲು ಕೇಂದ್ರ ಸರಕಾರವು ಒಂದು ಸಮಿತಿಯನ್ನು ನೇಮಿಸಿದೆ.

೧೯೫೨ ನೆ ಸಂತರ ಹೊರ ದೇಶಗಳಿಂದ ಆಹಾರ ಧಾನ್ಯ ತರಿಸಲಾಗದೆಂದು ಕೇಂದ್ರ ಸರಕಾರವು ಖಚಿತ ನಿರ್ಣಯ ಮಾಡಿರುವುದರಿಂದ ಜನತೆಯು ಆಹಾರಪದಾರ್ಥಗಳನ್ನು ನಿಷ್ಕೇಪವಿಡದೆ ಸರಕಾರದ ಪ್ರಯತ್ನದಲ್ಲಿ ಸಹಕರಿಸಬೇಕೆಂದು ಕೇಂದ್ರ ಸರಕಾರವು ಆಹ್ವಾನ ಮಾಡಿದೆ.

ತೆಲಗು ಆಸ್ಥಾನ ಕವಿಯೂದ ಶತವದಾನಿ ಕಲಾಪ್ರಪೂರ್ಣ ಜೆಳ್ಳಪಲ್ಲಿ ವೆಂಕಟಶಾಸ್ತ್ರಿಯವರು ತಾ. ೧೫ ರಲ್ಲಿ ತಮ್ಮ ಲಂನೇ ವಯಸ್ಸಿನಲ್ಲಿ ನಿಧನರಾದರು.

ಪೈಡೆಲ್ಫಿಜಿನ್ ಬಾಂಬಿನ ಪ್ರಯೋಗದಿಂದ ವಾಯುಮಂಡಲವು ಹಾಳಾಗಿ ಆ ವಾಯುವನ್ನು ಸೇವಿಸುವ ಜೀವಜಂತುಗಳೆಲ್ಲ ನಾಶವಾಗುವ ಸಾಧ್ಯತೆ ಇದೆಯೆಂದು ಜಗತ್ಪ್ರಸಿದ್ಧ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನರು ಹೇಳಿದ್ದಾರೆ.

ತಮಿಳುನಾಡು ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ನಡೆದ ರಾಜಕೀಯ ಸಮ್ಮೇಳನಕ್ಕೆ ಕಾಶ್ಮೀರದ ಮುಖ್ಯಮಂತ್ರಿ ಶೇಕ್ ಅಬ್ದುಲ್ಲರವರನ್ನು ಆಮಂತ್ರಿಸಲಾಗಿದ್ದು ಅವರು ಮದ್ರಾಸಿನಲ್ಲಿ ಮೂರು ದಿನಗಳ ವರೆಗಿದ್ದು ವಿವಿಧ ಸಭೆಗಳಲ್ಲಿ ಭಾಷಣಮಾಡಿ ಕಾಶ್ಮೀರ ಸಮಸ್ಯೆಯನ್ನು ವಿವರಿಸಿದರು. ಕಾಶ್ಮೀರದ ಸಮಸ್ಯೆಯೇ ಭಾರತದ ಸಮಸ್ಯೆಯೆಂದೂ, ದೆಹಲಿಯಲ್ಲಿಯ ಕೇಂದ್ರ ಸರಕಾರಕ್ಕೆ ಸಹಾಯವಿತ್ತು ಬಲಪಡಿಸಿದರೆ ಕಾಶ್ಮೀರಕ್ಕೆ ಸಹಾಯನೂಡಿದಂತೆ ಎಂದೂ, ಕಾಶ್ಮೀರದಲ್ಲಿ ಜನಮತ ತೆಗೆದರೆ ಪಾಕಿಸ್ತಾನಕ್ಕೆ ಅದು ದೊರೆಯುವುದಿಲ್ಲವೆಂಬ ಕಾರಣವೇ ಪಾಕಿಸ್ತಾನವು ಇಲ್ಲದ ಕುಂಟುನೆಪ ಹೇಳುತ್ತಿದೆಯೆಂದೂ ಹೇಳಿದರು.

ಸೇಲಂ ಜೈಲಿನಲ್ಲಿದ್ದ ಸುಮಾರು ೨೦೦ ಕಮ್ಯೂನಿಸ್ಟ್ ಕೈದಿಗಳಿಗೂ ಆಲ್ಲಿಯ ವಾರ್ಡರರಿಗೂ ಜೈಲು ಶಿಸ್ತಿನ ವಿಚಾರ ಹೊಡೆದಾಟವಾಗಿ ಗುಂಡು ಹಾರಿಸಬೇಕಾಗಿ ಬಂದು ೩೫ ಕೈದಿಗಳು ಮೃತರಾಗಿ ಅನೇಕರಿಗೆ ಗಾಯವಾಗಿದೆ.

ಪಾಕೇಸ್ತಾನಕ್ಕೆ ತೃಪ್ತಿಯಾಗುವಂತೆ ಕಾಶ್ಮೀರದ ವಿವಾದವನ್ನು ಆಷ್ಟು ಬೇಗ ಬಗೆಹರಿಸಬೇಕೆಂದು ಭಾರತದ ಮೇಲೆ ಎಂಗ್ಲೋ–ಅಮೇರಿಕನ್ ಕೂಟದ ಹಾಗೂ ಕೆಲವು ಕಾಮನ್‌ವೆಲ್ತ್ ರಾಷ್ಟ್ರಗಳ ಒತ್ತಾಯ ಬಲವಾಗಿದೆಯೆಂದು ತಿಳಿದು ಬರುತ್ತದೆ.

ಮಾರ್ಚ್ ತಾ. ೧೮ ರಲ್ಲಿ ನಡೆಯುವ ಸುಪ್ರೀಮ್ ಸೋವಿಯೆಟ್ ಚುನಾವಣೆಗಳಿಗೆ ರಂಗವು ಸಿದ್ಧವಾಗುತ್ತಿದ್ದು ಮುಖ್ಯ ಉಮೇದ್ವಾರರೆಂದು ಸ್ಟೆಲಿನರ ಹೆಸರು ಸೂಚಿತವಾಗಿದೆ. ನಾಲ್ಕು ಮಂದಿ ಉಮೇದ್ವಾರರೆಂದರೆ ರಷ್ಯದ ಮೂಜಿವಿಸೇಶಾಂಗ ಸಚಿವ ಮಿ. ವಿ. ಎಮ್. ಮೂಲಟೋವ್.

ಪಾಕಿಸ್ತಾನದಿಂದ 'ಭಾರತ ಯೂನಿಯನಿನ ಮುಸ್ಲೀಮರ ಬಂಧವಿಮೋಚನೆ'ಗೆಂದು ಪೂರ್ವ ಬಂಗಾಲದಿಂದ ಭಾರತಕ್ಕೆ ಬಂದಿದ್ದ ಆಶಾದುಲ್ಲಾ ಶಿರಾಜ ಎಂಬ ಪಾಕಿಸ್ತಾನಿಯನ್ನು ಕೂಚ್ ಬಿಹಾರ್‌ದಲ್ಲಿ ದಸ್ತಗಿರಿ ಮಾಡಿದರು.

ಜಮ್ಮೂ ಮತ್ತು ಕಾಶ್ಮೀರ ವಿಶ್ವವಿದ್ಯಾಲಯಗಳನ್ನು ತಾತ್ಕಾಲಿಕವಾಗಿ ೧೯೫೦ ದಶಂಬರ್ ತಿಂಗಳವರೆಗೆ ಭಾರತ ಸರ್ಕಾರವು ಮುಂದೂಡಲು ನಿರ್ಧರಿಸಿದೆ. ಅಲ್ಲಿ ನಡೆಯುವ ಪರೀಕ್ಷೆಗಳನ್ನು, ಪೂರೀಕ್ಷೆಗಳಲ್ಲಿ ಉತ್ತೀರ್ಣ ಹೊಂದಿದವರ ಡಿಗ್ರಿಗಳನ್ನೂ ಭಾರತ ಸರಕಾರವು ಮನ್ನಿಸುವುದು.

ವೈಸೂರಲ್ಲಿ ಜಾನುವಾರುಗಳ ರೋಗರುಜೆಗಳು ತುಂಬಾ ಹೆಚ್ಚಿವೆ. ಕಳೆದ ದಶಂಬರ ತಿಂಗಳಲ್ಲಿ ಸುಮಾರು ೯೪೩ ಜಾನುವಾರುಗಳಿಗೆ ರೋಗವು ತಗಲಿ ಆ ಪೈಕಿ ೪೩೮ ಜಾನುವಾರುಗಳು ಮೃತ್ಯವಪಟ್ಟಿರುವವು.

ಪಾಕೀಸ್ತಾನದ ಅತ್ಯಾಚಾರ ಪರಿಣಾಮಗಳನ್ನು ಕಂಡು ಪಶ್ಚಿಮ ಬಂಗಾಲದ ಮುಸ್ಲೀಮರು ಹಾಹಾಕಾರ ವ್ಯಕ್ತಪಡಿಸಿರುವರು. ಮುಸ್ಲೀಮರ ಕಡೆಯಿಂದ ಪಶ್ಚಿಮಮಂಡಲಗಳ ಪೂರ್ವ ಬಂಗಾಲದ ಮುಖ್ಯ ಮಂತ್ರಿಗಳನ್ನು ಕಂಡು, ಒಡನೆ ಈ ಅತ್ಯಾಚಾರಗಳನ್ನು ನಿಲ್ಲಿಸುವ ವ್ಯವಸ್ಥೆ ಯಾಗುಬೇಕೆಂದು ನಿವೇದಿಸಿಕೊಂಡಿವೆ.

ಪ್ರತ್ಯೇಕ ಪ್ರಾಂತವಾಗಿರುವ ಡೆಲ್ಲಿಗೆ ಕೇಂದ್ರ ಜನತಾ ಸಭೆಯುಲ್ಲಿಳ ಸ್ಥಳಗಳೂ ಸ್ಟೇಟ್ ಕಾನ್ಸಿಲಿನಲ್ಲಿ ಎರಡು ಸ್ಥಳಗಳೂ ಕೊಡಲ್ಪಡಬೇಕೆಂದು ಡೆಲ್ಲಿಯ ಸಲಹಾ ಸಮಿತಿಯು ತನ್ನ ಶಿಫಾರಸಿಯನ್ನು ಮುಂದಿಟ್ಟಿದೆ.

ಓದುಗರ ಓಲೆಗಳು.

ಚೀಫ್ ಕಮಿಷನರಲ್ಲಿ ವಿನಂತಿ.

ರೇಶನ್ ಅಂಗಡಿಗಳಲ್ಲಿ ದೊರೆಯುವ ಅಕ್ಕಿಯ ವಿಚಾರ ಅನೇಕ ಬಾರಿ ಪತ್ರಿಕೆಗಳಲ್ಲಿ ಬರೆಯಲಾಗಿದೆ. ರೇಶನಿಂಗ್ ಇಲಾಖೆಯ ಅಧಿಕಾರಿಗಳಾಗಲೀ, ಕಡೆಗೆ ಚೀಫ್ ಕಮಿಷನರಾಗಲೀ, ಈ ವಿಚಾರ ಸ್ವಲ್ಪವೂ ಗಮನಿಸಿದಂತೆ ಕಾಣುವದಿಲ್ಲ. ಉದಾಹರಣೆಗೆ ಮಹದೇವ ಪೇಟೆ ರೇಶನಿಂಗ್ ಅಂಗಡಿಯಲ್ಲಿ ಈ ಕಳೆದ ಒಂದು ತಿಂಗಳಿಂದ ಕೊಡಲ್ಪಡುವ ಅಕ್ಕಿಯು ಮನುಷ್ಯರು ಉಪಯೋಗಿಸುವಂತಿಲ್ಲ. ಈ ರೇಷನ್ ಅಂಗಡಿಯವರೇ ಮಿಲ್ಲಂ ಮೂಲೀಕರಾಗಿದ್ದು ಎಲ್ಲೋ ಕಡಿಮೆ ಕ್ರಯಕ್ಕೆ ದೊರೆತ ಈ ಹಾಳು ಅಕ್ಕಿಯನ್ನು ಸರಬರಾಯಿ ಮಾಡುತಿದ್ದಾರೆ. ಅಕ್ಕಿಯಲ್ಲಿರುವ ಬತ್ತ ಕಲ್ಲುಗಳ ವಿಪರೀತವಾಗಿನೆನಮಗೆ ರೇಶನಾಗಿ ದೊರೆಯುವ ೫೫ ಸೇರು ಅಕ್ಕಿಯನ್ನು ಕುಟ್ಟಿ ಕಲ್ಲು ತೆಗೆದು ಆಗುವಾಗ ಕೇವಲ ೧೫ ಸೇರು ಮಾತ್ರ ಉಳಿಯುವುದು. ಇದು ರೂಪಾಯಿಗೆ ಎರಡು ಸೇರು ಅಕ್ಕಿ ಕೊಂಡು ಕೊಂಡಂತಾಯಿತು. ಈ ರೀತಿಯಾಗಿ ಬಡಜನರ ಹೊಟ್ಟೆಗೆ ಹೊಡೆಯುತಿದ್ದರೂ ರೇಶನಿಂಗ್ ಅಧಿಕಾರಿಗಳಾಗಲೀ, ಮೇಲಧಿಕಾರಿಗಳಾಗಲೀ ಗಮನಿಸದಿರುವುದು ಶೋಚನೀಯ. ಬೆಳೆ ಬಂದ ಈ ಕಾಲದಲ್ಲೇ ಈ ರೀತಿಯೊದರೆ ಮುಂದೆ ಬಡವರ ಗೋಳು ಕೇಳುವವರಾರು? ಆದ್ದರಿಂದ ಚೀಫ್ ಕಮಿಷನರು ಒಮ್ಮೆ ತನ್ನ ಮೂಗಿನನೇರಿಯಲ್ಲಿರುವ ಈ ರೇಶನ್ ಡಿಪೋವನ್ನು ಸಂದರ್ಶಿಸಿ ಅಲ್ಲಿ ಕೊಡಲ್ಪಡುವ ಅಕ್ಕಿಯನ್ನು ಪರೀಕ್ಷಿಸಬೇಕು. ಹಾಗೆ ಮಾಡುವರೇ?

ರಾಮಯ್ಯ.

ಮರೆನಾಡು.

೧೯೪೮ರಲ್ಲಿ ಹಳೆಯ ಚೀಫ್ ಕಮಿಷನರು ಮರೆನಾಡಿಗೆ ಬಂದ ಶಾಲೆಯನ್ನೂ ಆಸ್ಪತ್ರೆಯನ್ನೂ ಕಟ್ಟಿಸಿಕೊಡುವದಾಗಿಯೂ, ರಸ್ತೆಗೆ ಕಲ್ಲುಹಾಕಿ ಸುರಸ್ತಿ ಮಾಡಿಸುವದಾಗಿಯೂ ಭರವಸೆ ಕೊಟ್ಟು ಹೋದರು. ೧೯೪೯ನೇ ಡಿಸೆಂಬರ್ ತಿಂಗಳಲ್ಲಿ ಈಗಿನ ಚೀಫ್ ಕಮಿಷನರು ಮರೆನಾಡಿಗೆ ಬರುವೆನೆಂದು ಹೇಳಿ ಕಳುಹಿಸಿದ್ದರಿಂದ ಹತ್ತಿರ ಮಾತ್ರ ಬಂದು ಮರೆನಾಡು ಗಡಿಯಲ್ಲಿ ನಮ್ಮನ್ನು ಕರೆಸಿ ರಸ್ತೆ ರಿಪೇರಿ, ಆಸ್ಪತ್ರೆ, ಶಾಲೆ ಕಟ್ಟಿಸಿ ಕೊಡುವ ಖಂಡಿತವಾದ ಭರವಸೆ ಇತ್ತು ಹಿಂತಿರುಗಿದರು. ಆದರೆ ಯಾವ ಚೀಫ್ ಕಮಿಷನರು ಬರಲಿ, ಯಾವ ಇಲಾಖೆಗೆ ಯಾವದೇ ಅಧಿಕಾರಿ ಬರಲಿ, ಮರೆನಾಡಿನ ಸ್ಥಿತಿ ಇಂದಿನಂತೆಯೇ ಇಂದು. ಈ ನಾಡಿನ ಬಗ್ಗೆ ಸರಕಾರಿ ಅಧಿಕಾರಿಗಳಿರಲಿ, ನಮ್ಮ ಓಟು ಪಡೆದ ಜನ ಪ್ರತಿನಿಧಿಗಳೂ ದೃಷ್ಟಿ ಹೊರಳಿಸುತ್ತಿಲ್ಲವೆಂದರೆ ಈ ನಾಡಿನವರ ದುರಾದೃಷ್ಟವೆನ್ನಬೇಕೆ? ಇನ್ನಾದರೂ ಈ ನಾಡಿನವರು ಎಚ್ಚರಗೊಳ್ಳಬೇಕು. ಇಂದಿನ ಸರಕಾರದಲ್ಲಿ ಕಾಣಿಸದವನಿಗೆ ವಿನಃ ಅಲ್ಲದೆ ತಮ್ಮ ಕುಂದುಕೊರತೆಗಳನ್ನು ತಿಳಿಸಲು ಅವಕಾಶ ಮತ್ತು. ಆದ್ದರಿಂದ ನಾಡಿನವರು ಒಂದಾಗಿ ನಮ್ಮ ಕೇಳಿಕೆಯನ್ನು ಸರಕಾರದ ಮುಂದಿಟ್ಟು ಅದು ಅನಿವಾರ್ಯವಾಗಿ ಕೆಲಸ ಕೈಕೊಳ್ಳುವಂತೆ ಬಲಾತ್ಕರಿಸಬೇಕಿದೆ.

ಮುದ್ದಯ್ಯ.

ಜುಗಾರಿ

ಕೊಡಗಿನಲ್ಲಿ ಜುಗಾರಿ ಆಟ ಹೆಚ್ಚುತ್ತಿದೆ. ಮಡಿಕೇರಿಯಲ್ಲೇ ಕೆಲವರು ಗುಟ್ಟಾಗಿ ಇದನ್ನು ನಡಾಯಿಸುತಿದ್ದಾರೆ. ತಾ. ೬, ೭ ಮತ್ತು ೮ ರಲ್ಲಿ ಮೂರ್ನಾಡಿನಲ್ಲಿ ಕೋಳಿ ಜೂಜಿನಿಂದಿಗೆ ಇದೂ ನಡೆದಿದೆ. ಜೂಜು ಏರ್ಪಡಿಸಿದವರು ಜೂಜು, ಜುಗಾರಿಗಳಲ್ಲಿ ಭಾಗವಹಿಸಿದವರಿಂದ ಪ್ರತಿಯೊಬ್ಬನಿಗೆ ರೂಪಾಯಿ ಒಂದರಂತೆ ಕವಿಷನ್ ಪಡೆದು ಸಾವಿರಗಟ್ಟಲೆ ರೂಪಾಯಿ ಸಂಪಾದಿಸಿರುವರಂತೆ. ಈ ರೀತಿಯ ಜೂಜಾಟಗಳು ನಡೆಯುವಂತೆ ಪೋಲೀಸರು ಎಚ್ಚರ ವಹಿಸಬೇಕಾದ್ದು ಸಹಜ. ಆದರೆ ದುರದೃಷ್ಟವಶಾತ್ ಕೊಡಗಿನ ಪೋಲೀಸರಿಗೆ ಈ ವರೆಗೆ ಇಂಥಾ ಘಟನೆ ದೊರೆಯಲೇ ಇಲ್ಲವೆಂದು ಕಂಡುಬರುವದು! ಈ ಜುಗಾರಿಯ ಸಂದರ್ಭವೇ ಮಧ್ಯಪಾನದ ಕಪ್ಪುಚುಕ್ಕೆಗೂ ಅಪವಾದವಿತ್ತಿದೆ ಮೂರ್ನಾಡಿನಲ್ಲಿ ಸಾರಾಯಿ ಕುಪ್ಪಿಗೆ ರೂ ೮, ೧೦ ರಂತೆ ನೂರಾಟವಾಗಿ ದೊರೆಯಿಂದು ವರ್ತಮಾನವಿದೆ. ನಿಯಂತ್ರಣ ಅಧಿಕಾರಿಗಳಾಗಲೀ, ಪೋಲೀಸರಾಗಲೀ, ಇಂಥಾ ಕಪ್ಪುಚುಕ್ಕೆಯನ್ನು, ಇಲ್ಲವೇ ಜೂಜಾಟವನ್ನು ಒಂದೇ ಏಟಿಗೆ ಹಿಡಿದದ್ದು ನನ್ನ ಅರಿವಿಕೆಗೆ ಬಂದಿಲ್ಲ. ಇದು ಸಂಬಂಧಿಸಿದ ಅಧಿಕಾರಿಗಳ ಅಶಕ್ತತೆಯೇ ಅಥವಾ ಬೇರೆ ಯಾವುದಾದರೂ ಕಾರಣವಿರಬಹುದೇ?

ಕುಶಾಲಪ್ಪ.

ರಿಪಬ್ಲಿಕ್ ದಿನಾಚರಣೆ.

ರಿಪಬ್ಲಿಕ್ ದಿನಾಚರಣೆಯು ಸಂಬಂಧ ಕೊಡಗಿನ ಎಲ್ಲಾ ಶಾಲೆಗಳಿಗೂ ಶಾಲೆಗಳ ಯೋಗ್ಯತಾನುಸಾರ ಸರಕಾರದಿಂದ ಹಣ ಮಂಜೂರು ಆಗಿದೆಯೆಂದೂ, ಹೈಯರ್ ಎಲಿಮೆಂಟರಿ ಶಾಲೆಗಳಿಗೆ ೭೫ ರೂಗಳಂತೆ ಕಳುಹಿಸಲಾಗಿದೆಯೆಂದೂ ತಿಳಿದುಬಂದಿದೆ. ಕೆಲವು ಶಾಲೆಗಳಲ್ಲಿ ಉಪಾಧ್ಯಾಯರು ಬಹಳ ಉತ್ಸಾಹದಿಂದ ಆ ದಿನವನ್ನು ಒಪ್ಪೊತ್ತಾಲಗಮೆಂತೇ ಆಚರಿಸುವುದಾಗಿಯೂ ತಿಳಿಸಿದರೆಂದು ತಿಳಿಯಲು ತುಂಬಾ ಸಂತೋಷ.

ಹೈಯರ್ ಎಲಿಮೆಂಟರಿ ಶಾಲೆಗಳ ವ್ಯತಿರಿಕ್ತ ಕಾಕೋಟುಪರಂಬು ಶಾಲೆಯು ಒಂದು. ಇದು ದೇಶದ ಮಧ್ಯದಲ್ಲಿ ಮಡಿಕೇರಿಗೂ ವೀರರಾಜಪೇಟೆಯ ರಸ್ತೆಕರೆಯಲ್ಲಿದೆ ಎಂಬುದು ಎಲ್ಲರಿಗೂ ಗೊತ್ತು. ಈ ಶಾಲೆಯು ವಿದ್ಯಾರ್ಥಿಯರಿಗೆ ಆ ದಿನ ರಜ ಎಂಬದಾಗಿ ಮಾತ್ರ ಹೇಳಿದ್ದಾರೆ ವಿನಹ ಆ ದಿನದ ಕರ್ತವ್ಯವನ್ನು ತಿಳಿಸದ ಕಾರಣವು ಅಲ್ಲಿಯ ಹೆಡ್‌ಮಾಸ್ಟರವರಿಗೆ ಗೊತ್ತು ಹೆಡ್‌ಮಾಸ್ಟರವರು ೨೫ನೇ ತಾರೀಕು ಬುಧವಾರ ವೀರರಾಜಪೇಟೆಯಲ್ಲಿ ಇದ್ದರೂ ಅವರಿಗೆ ೨೬ನೇ ದಿನ ರಿಪಬ್ಲಿಕ್ ದಿನವನ್ನು ಹೇಗೆ ಶಾಲೆಯಲ್ಲಿ ಆಚರಿಸಬೇಕೆಂಬ ವಿಷಯ ತಿಳಿಯದೆ ಇದ್ದದ್ದು ಬಹಳ ವಿಷಾದಕರ. ಇವರು ಗುರುವಾರ ದಿನ ಸುಮಾರು ೧೧ ಗಂಟೆ ಸಮಯಕ್ಕೆ ಶಾಲೆಗೆ ಹೋಗುವಾಗ ದಾರಿಯಲ್ಲಿ ಕಂಡ ಮಕ್ಕಳಿಗೆ ವರ್ತಮಾನ ಕೊಟ್ಟರಂತೆ. ಶಾಲೆಯು ಪ್ಯೂನ್ ಮುಖಾಂತರ ಎಲ್ಲಾ ಉಪಾಧ್ಯಾಯರಿಗೆ ತಿಳಿಸಿ ಅಲ್ಲಿ ನೆರೆದಿದ್ದ ಅಲ್ಪ ಸ್ವಲ್ಪ ಮಕ್ಕಳನ್ನು ಸೇರಿಸಿಕೊಂಡು ಆಟೋಟ ನಡೆಸಿ ದಿನ ಸಂದಾಯ ಮಾಡಿದರೆಂದು ತಿಳಿಯುತ್ತೇನೆ. ಕಾರ್ಯದಕ್ಷ ಹೆಡ್‌ಮಾಸ್ಟರವರು ಮುಂದಾಗಿ ಶಾಲೆಯು ಪ್ರಾರಂಭವಾಗುವ ದಿನದ ಕಾರ್ಯಕ್ರಮವನ್ನು ಮೊದಲೇ ತಿಳಿಸಿದ್ದಲ್ಲಿ ಉಪಾಧ್ಯಾಯರು ಮತ್ತು ವಿದ್ಯಾರ್ಥಿಯರಿಗೆ ಪ್ರೇರಣೆ ಎಷ್ಟಿರಬೇಕು! ಬದಲು ಇವರು ಆ ದಿನವನ್ನು ಅಷ್ಟು ಆಸಡ್ಡೆಯಲ್ಲಿ ನಡಿಸಿದಕ್ಕೆ ತುಂಬಾ ವ್ಯಸನಪಡಬೇಕು. ಇಂಥಾ ಅಪೂರ್ವ ಸಂದರ್ಭದಲ್ಲಿಯೇ ಇವರ ವರ್ತನೆಯು ಹೀಗಿರುವಾಗ ಇನ್ನು ದಿನನಿತ್ಯದ ಕೆಲಸವು ಹೇಗೆ ಸಾಗುತ್ತಿದೆಯೆಂದು ಇಲಾಖೆ ಅಧಿಕಾರಿಗಳು ನಿಗವಿಡಬೇಕು.

'ಗ್ರಾಮದ ರೈತ.'

ಬತ್ತ ವಹಿವಾಟು.

ಪ್ರತಿ ವರ್ಷವೂ ಬತ್ತ ವಹಿವಾಟಿನಲ್ಲಿ ಈ ಸಮಯದಲ್ಲಿ ಬಡ ಜನರಿಗೆ ವಿಪರೀತ ತೊಂದರೆಯಾಗುತ್ತಿದೆ. ಕೊಡಗಿನಿಂದ ಹೊರಗೆ ಕಳುಹಿಸುವ ಉಳುವರಿ ಬತ್ತವನ್ನು ಅಕ್ಕಿಯ ರೂಪವಾಗಿ ಕೊಡುತ್ತಿರುವದರಿಂದ ಕೊಡಗಿನ ಮಿಲ್ ಮೂಲೀಕರಿಗೆ ಲಾಭವಾಗುತ್ತಿರಬಹುದು. ಆದರೆ ಇದರಿಂದ ಬಡ ಜನರಿಗೆ ಬಹಳ ತೊಂದರೆಯಾಗುತ್ತಿದೆ. ವರ್ಷದ ನಾನಾ ಖರ್ಚುಗಳು, ಆ ಬಗ್ಗೆ ಮಾಡಿದ ಸಾಲ ಮೊದಲಾದವನ್ನು ಚುಕ್ತಾ ಮಾಡಿಸಲು ಈ ಬತ್ತ ಮಾರಿಯೇ ಅತನಿಗೆ ಹಣ ಬರಬೇಕಿದೆ. ಆದರೆ ಮಿಲ್ ಮೂಲೀಕರು ಅಕ್ಕಿ ಮಾಡಿ ಕಳುಹಿಸಲು ತಡವಾಗಿ ತಿರುವದರಿಂದ ಬಡ ಜನರ ಬತ್ತವು ಕೊಳ್ಳಲ್ಪಡದೆ ತೊಂದರೆಯಾಗುತ್ತಿದೆ. ವಿಜಯಂಟರ ಯಾ ಮಿಲ್ ಮೂಲೀಕರ ಅನುಕೂಲದಂತೆ ಬತ್ತ ಕೊಳ್ಳಲ್ಪಡುತ್ತಿದೆ. ಸರಕಾರವು ಕೆಲವು ಮಿಲ್ ಮೂಲೀಕರಿಗೆ ಹಿತಮಾಡುವ ದೃಷ್ಟಿಯಿಂದ ಬಹು ಜನ ಬಡವರಿಗೆ ಆಹುತವಾಗುತ್ತಿರುವದನ್ನು ಗಮನಿಸಬೇಕು. ಹಣದ ತುರ್ತಿನ ಕಾರಣ ಕೆಲವರು ನಿಯಂತ್ರಿತ ಬೆಲೆಗಿಂತಲೂ ಕಡಿಮೆ ದರಕ್ಕೆ ಮೂರಾಟ ಮಾಡಿದ ನಿದರ್ಶನವಿದೆ. ಸರಕಾರ ಇತ್ತ ಗಮನಿಸಿ ಬಡವರ ಹಿತವೇ ತನ್ನ ಗುರಿಯೆಂದು ವರ್ತಿಸಬೇಕು.

ವೈತ.

ಒಂದು ಸೂಚನೆ.

ಕಾಲೇಜಿನ ವಿದ್ಯಾರ್ಥಿಗಳು ಕಾಲೇಜು ಪ್ರಾರಂಭವಾದ ಸಮಯದಲ್ಲಿ ಸ್ವಲ್ಪ ಬೇಜವಾಬ್ದಾರಿಯಿಂದ ವರ್ತಿಸಿದರೂ ಇತ್ತೀಚ್ಚಲಾಗಿ ತಮ್ಮ ಜವಾಬ್ದಾರಿಯನ್ನರಿತ್ಯ ಯೋಗ್ಯ ರೀತಿ ವರ್ತಿಸುತ್ತಿದ್ದಾರೆ. ಕಾಲೇಜಿನ ಪ್ರಗತಿಯನ್ನು ಬಯಸಿ ಸಾರ್ವಜನಿಕರಲ್ಲಿ ಒಂದು ಸೂಚನೆ ಏನೆಂದರೆ ಸಾರ್ವಜನಿಕರು ಒಂದು ನಿಧಿಯನ್ನು ಸಂಗ್ರಹಿಸಿ ಅದನ್ನು ನಿಕ್ಷೇಪವಾಗಿಟ್ಟು ಅದರ ಬಡ್ಡಿಯಿಂದ ಪ್ರತಿ ವರ್ಷ ಕಾಲೇಜಿನ ಪ್ರತಿ ತರಗತಿಯು ಮೂರು ಒಳ್ಳೆ ನಡತೆಯ ವಿದ್ಯಾರ್ಥಿಗಳಿಗೆ ಬಹುಮಾನ ಕೊಡುವ ಏರ್ಪಾಡು ಮಾಡಬೇಕು. ಇಂಥಾ ಒಂದು ನಿಧಿಗೆ ಕಡಿಮೆ ೫೦೦೦ ರೂ ಸಂಗ್ರಹಿಸುವ ಸ್ವಯತ್ನವನ್ನು ಸಾರ್ವಜನಿಕ ಮುಂದಾಳುಗಳೂ, ಕಾಲೇಜು ಹಿತಚಿಂತಕರೂ ಮಾಡುವರಾಗಿ ಆಶಿಸಲಾಗಿದೆ.

ಕೆ. ದೇವಯ್ಯ.

ಸತ್ಯಜೀವನ ಸಹಕಾರ ಸಂಘ.

ತೀರ ಹಿಂದೆ ಬಿದ್ದಿರುವ ಮಡಿಕೇರಿ ನಾಡಿನ ಹವಿಯೂಲ, ಮುಟ್ಲು ಮತ್ತು ಹಚ್ಚಿನಾಡು ಗ್ರಾಮಸ್ಥರು ತಾ. ೭ ರಲ್ಲಿ ಶ್ರೀ ಕೊಂಡಿಂಜನ್ಮನೆ ಗಣಪಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು. ಸಭೆಯಲ್ಲಿ ಈ ಗ್ರಾಮಗಳ ದುಸ್ಥಿತಿಯನ್ನು, ಜನತೆಗೆ ವಿದ್ಯೆಯ ಅನುವಿಲ್ಲದೆ ಇರುವ ಅಂಧಕಾರವನ್ನು ವಿವರಿಸಿ ಅಧ್ಯಕ್ಷರ ಸೂಚನೆಯಂತೆ ಈ ಮೂರು ಗ್ರಾಮಗಳಿಗೆ ಒಂದು ಸಹಕಾರ ಸಂಘವನ್ನು ಸ್ಥಾಪಿಸಿಕೊಳ್ಳಲು ತೀರ್ಮಾನವಾಯಿತು. ಸಭೆಯಲ್ಲಿಯೇ ಕೆಲವು ಪಾಲು ಮೊಬಲಗು ಸಂಗ್ರಹವಾಯಿತು. ಶ್ರೀ ಪುದಿಯತಂಡ ಅಪ್ಪಯ್ಯನವರು ಮತ್ತು ಶ್ರೀ ಸಿ ಎಂ. ಚಂಗವ್ವಯ್ಯನವರು ಸೂತಾಡಿದರು. ಈ ಗ್ರಾಮಗಳ ಬಗ್ಗೆ ಅಧ್ಯಕ್ಷರು ವಹಿಸಿದ ಆಸ್ಥೆಗಾಗಿ ಅವರನ್ನು ವಂದಿಸಲಾಯಿತು. ಈ ಗ್ರಾಮದ ಸಂಘಕ್ಕೆ 'ಸತ್ಯಜೀವನ ಸಂಘ'ವೆಂದು ಹೆಸರಿಟ್ಟು ಆ ಮೂಲಕ ಗ್ರಾಮ್ಯದ ಹಿತಕ್ಕಾಗಿ ದುಡಿಯುಬೇಕೆಂದು ಅಪೀಲು ಮಾಡಲಾಯಿತು.

ಹಾಜರಿದ್ದವ.

ವಾರ್ತೆಗಳು.

ಕಾಶ್ಮೀರ ಪ್ರಕರಣವು 'ಸೆಕ್ಯೂರಿಟಿ ಕೌನ್ಸಿಲಿನ ಮುಂದೆ ಚರ್ಚೆಗೆ ಬಂದಿದ್ದು ಆ ಬಗ್ಗೆ ಕಾಶ್ಮೀರ ಸಮಿತಿಯು ನೇಮಿಸಿದ ನಾಟೋ ನರು ಮಾಡಿದ ನರದಿ ಮತ್ತು ಭಾರತ ಮತ್ತು ಕಾಶ್ಮೀರ ಪ್ರತಿನಿಧಿಗಳು ಮಾಡಿದ ಭಾಷಣಗಳು ಪರ್ಯಾಲೋಚಿಸಲ್ಪಡುತ್ತಿವೆ.

ಚೀನಾದ ಮುಂದಾಳು ಶ್ರೀ ಮಾವೋರವರು ಮಾಸ್ಕೋಕ್ಕೆ ಹೋಗಿದ್ದಾರೆ. ಅಲ್ಲಿ ಸ್ಟಾಲಿನರು ಅವರನ್ನು ಆದರದಿಂದ ಸ್ವಾಗತಿಸಿ ಔತಣಕೊಟ್ಟರು. ಮಾವೋರವರು ರಷ್ಯಾದ ಕೈಗಾರಿಕಾ ಕೇಂದ್ರಗಳನ್ನು ಸಂದರ್ಶಿಸಿ ವಿಹಿತ ಸಂಗ್ರಹಿಸುತ್ತಿದ್ದಾರೆ. ಚೀನಾ ರಷ್ಯಾಗಳೊಡನೆ ೩೦ ವರ್ಷಗಳ ಒಪ್ಪಂದವಾಗಿ ಚೀನಾದ ಧನ ಸಹಾಯ ನೀಡುವ ಶರತನ್ನು ರಷ್ಯಾ ಒಪ್ಪಿದೆ. ಯುದ್ಧದ ಕಾಲದಲ್ಲಿ ಎರಡು ರಾಷ್ಟ್ರಗಳು ಒಂದಾಗಿ ಹೋರಾಡುವ ಶರತನ್ನು ಒಪ್ಪಿರುವರು.

(ಇನೇ ಪುಠದಿಂದ ಸಾಗಿದ್ದು)

ವಂದನೆಗಳು.

ಕಾಲೇಜ್ ಯೂನಿಯನ್ನಿನ ಜೊತೆ ಕಾರ್ಯದರ್ಶಿಯಾದ ಮಿಸ್. ಬಿ. ಕೆ. ಮುತ್ತಮ್ಮನವರು ಅಧ್ಯಕ್ಷರಿಗೂ, ನೆರೆದವರಿಗೂ, ಬಹುಮೂನಕ್ಕೆ ಸಹಾಯ ಮಾಡಿದವರಿಗೂ, ಹೈಸ್ಕೂಲ್ ಮುಖ್ಯೋಪಧ್ಯಾಯರಿಗೂ, ಸಹಕರಿಸಿದ ಸರ್ವರಿಗೂ ಕಾಲೇಜಿನ ವಂದನೆಗಳನ್ನರ್ಪಿಸಿದರು.

ಮನೋರಂಜನೆ.

ನಂತರ ಮನೋರಂಜನೆಯ ಕಾರ್ಯಕ್ರಮವಾದ ನಾಟಕಗಳು ನಡೆದವು. ಈ ನಾಟಕಗಳ ವಿಷಯ ಮತ್ತು ಪ್ರದರ್ಶನಗಳಲ್ಲಿ ಕಲಾತ್ಮಕ ದೃಷ್ಟಿಯಿಂದ ಅಲ್ಪಸ್ವಲ್ಪ ನ್ಯೂನತೆಗಳಿರಬಹುದಾದರೂ ಮಡಿಕೇರಿಯಲ್ಲಿ ಈ ವರೆಗೆ ನಡೆದ ನಾಟಕಗಳಿಗಿಂತಾ ಭಿನ್ನವಾದ ಹೊಸ ಹೆಜ್ಜೆಯೊಂದನ್ನು ಕಾಲೇಜು ಮುಂದಿಟ್ಟು ಇತರರಿಗೆ ಪ್ರದರ್ಶನ ಮಾಡಿದೆ. ನಾಟಕಗಳಿಗೆ ಆರಿಸಿದ ವಿಷಯಗಳು ಸೂಕ್ತವೂ ಸಮಯೋಚಿತವೂ ಆಗಿದ್ದವು. ರವೀಂದ್ರನಾಥರ ಒಂದೆರಡು ಅಮರ ಕೃತಿಗಳನ್ನು ಹೃದಯಂಗಮವಾಗಿ ಜನತೆಯ ಮುಂದಿಟ್ಟರು. ಉದ್ದವಾದ ಒಂದೋ ಎರಡೋ ನಾಟಕದ ಬದಲು ಹಲವು ಚಿಕ್ಕ ಚಿಕ್ಕ ದೃಶ್ಯಗಳನ್ನು ಏರ್ಪಡಿಸಿದುದು ಯುಕ್ತವಾಯಿತು. ಆದರೆ ಬಹುಮೂನ ವಿತರಣೆಯ ವಿಚಾರ ಒಂದು ಮಾತು ಹೇಳಬೇಕಿದೆ. ಉತ್ತಮವಾಗಿ ಅಭಿನಯಿಸಿದವರನ್ನು ಹೆಕ್ಕಲು ನೇಮಕವಾಗಿದ್ದ ಜಡ್ಜರು ಯಾವ ದೃಷ್ಟಿಯಿಂದ ಅಭಿನಯ ಕಲೆಯನ್ನು ಪರಿಶೀಲಿಸಿ ತೀರ್ಪಿತ್ತರೋ ತಿಳಿಯದು. ಕಲೆಯನ್ನು ಪ್ರೋತ್ಸಾಹಿಸುವದೇ ಬಹುಮೂನ ಕೊಡುವದರ ಆಶಯವಾದರೆ ಹೃದಯಸ್ಪರ್ಶಿಯಾಗಿ ಅಭಿನಯಿಸಿದ 'ಬಿಷಪ್ಪ'ರ ಪಾತ್ರ ವಹಿಸಿದವರಿಗೂ ಸರಳ ಹಾಗೂ ನೈಸರ್ಗಿಕ ರೀತಿ ಅಭಿನಯಿಸಿದ 'ಚಿತ್ರಗುಪ್ತ'ನ ಪಾತ್ರಧಾರಿಗೂ ಹಬುಮೂನ ಕೊಡ್ಬಡಬೇಕಿತ್ತು. ಹೇಗೂ ಕಾಲೇಜಿನ ಪ್ರಥಮ ವಾರ್ಷಿಕೋತ್ಸವವು ಕಾಲೇಜಿನ ಬಗ್ಗೆ ಜನತೆಯಲ್ಲಿ ಅಭಿಮಾನಬರುವ ರೀತಿ ಜಯಪ್ರದವಾಗಿ ನಡೆಯಿತು.

"G"

ಬ್ರಿಟನಿನ ಚುನಾವಣೆ.

೧೯೪೫ರಿಂದ ಬ್ರಿಟನನ್ನು ಆಳುತ್ತಿದ್ದ ಮಂತ್ರಿ ಮಂಡಲವನ್ನು ಬ್ರಿಟಿಷ್ ಸಾರ್ವಭೌಮರು ವಿಸರ್ಜಿಸಿದರು. ನೂತನ ಮಂತ್ರಿಮಂಡಲದ ಚುನಾವಣೆಗಾಗಿ ದೇಶದಾದ್ಯಂತ ಬಿರುಸಿನ ಸಿದ್ಧತೆಗಳು ನಡೆಯುತ್ತಿವೆ. ಇದೇ ತಿಂಗಳ ತೃತೀಯ ವಾರದಲ್ಲಿ ಮತದಾನವು ನಡೆಯಲಿದೆ. ಮಾರ್ಚ್ ತಿಂಗಳ ಮೊದಲ ವಾರದಲ್ಲಿ ನೂತನ ಮಂತ್ರಿಮಂಡಲವು, ಆರಿಸಿ ಬಂದ ಸದಸ್ಯರಿಂದ ಪ್ರತಿಜ್ಞಾ ವಿಧಿಗಳನ್ನು ಕೈಕೊಳ್ಳುವುದು. ಬ್ರಿಟೈನಿನಲ್ಲಿ ಸುಮಾರು ೩೪ ಮಿಲಿಯ ಮತದಾರರಿರುವರು. ಚುನಾವಣೆಗೆ ನಿಂತ ಹುರಿಯಾಳುಗಳ ಸಂಖ್ಯೆ ೧೭೦೦ರಷ್ಟಿರುವುದು. ಸೋಶಲಿಸ್ಟರು (ಲೇಬರ್) ಮತ್ತು ಕನ್ಸರ್ವೇಟೀವ್ ಪಕ್ಷದವರು ಚುನಾವಣೆಗೆ ಸ್ಪರ್ಧಿಸುವ ಪ್ರಮುಖ ಪಕ್ಷಗಳವರು. ಇನ್ನು ಮಂದಪಕ್ಷದವರು ಸುಮಾರು ೪೦೦ ಮಂದಿ ಉಮೇದ್ವಾರರನ್ನು ಮತ್ತು ಕಮ್ಯೂನಿಸ್ಟರು ೧೦೦ ಮಂದಿಯನ್ನು ನಿಲ್ಲಿಸಿದ್ದಾರೆ. ಸ್ವತಂತ್ರ ಪಕ್ಷವೆಂಬ ಬಿಲ್ಲೆ ಕಟ್ಟಿಕೊಂಡಿರುವವರ ಸಂಖ್ಯೆಯೂ ಬೇರೆ ಇದೆ. ಮುಂಬರುವ ಮಂತ್ರಿಮಂಡಲದಲ್ಲಿ ಈ ಮೊದಲಿದ್ದಂತೆ ೬೪೦ ಸ್ಥಾನಗಳಿರದೆ ಬರೇ ೬೩೫ ಸ್ಥಾನಗಳು ಮಾತ್ರ ಇರುವವು. ಚುನಾವಣೆಗೆ ಸ್ಪರ್ಧಿಸಿದ ಬೇರೆ ಬೇರೆ ಪ್ರಮುಖ ಪಕ್ಷಗಳು ತಂತಮ್ಮ ಕಡೆಯ ಪ್ರಸಿದ್ಧಿ ಪತ್ರಿಕೆಗಳನ್ನು ಈಗಾಗಲೇ ಹೊರಡಿಸಿಯೂ ಗಿದೆ. ಬ್ರಿಟೈನಿನ ಲೇಬರ್ ಮಂತ್ರಿ ಮಂಡಲದ ಪ್ರಧಾನ ಮಿ| ಕ್ಲೆಮೆಂಟ್ ಎಟ್ಲಿಯವರಿಗೆ ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ತಮ್ಮ ಪಕ್ಷವೇ ಅಧಿಕ ಮತಗಳನ್ನು ಪಡೆದು ಗೆಲ್ಲುವುದೆಂಬ ಅಖಂಡ ವಿಶ್ವಾಸವಿದೆ. ಅದನ್ನು ಲೇಬರ್ ಪಕ್ಷದ ಪತ್ರಿಕೆ 'ಡೈಲಿ ಹೆರಾಲ್ಡ್' ಸಂಪಾದಕರಲ್ಲಿ ಅವರು ಇತ್ತೀಚೆಗೆ ವ್ಯಕ್ತಪಡಿಸಿಯೂ ಆಗಿದೆ. ಲೇಬರ್ ಸರಕಾರವು ೧೯೪೫ರಿಂದ ೧೯೫೦ ವರೆಗಿನ ತನ್ನ ಕಾರ್ಯಕೀರ್ದಿಯಲ್ಲಿ ಸಾಧಿಸಿದ ಎರಡು ಮಹತ್ವಪೂರ್ಣ ಕಾರ್ಯಗಳೆಂದರೆ ಭಾರತ ಪಾಕ್ ಸ್ಥಾನಗಳನ್ನು ಆ ರಾಷ್ಟ್ರಗಳ ಪ್ರಜೆಗಳಿಗೆ ಬಿಟ್ಟುಕೊಟ್ಟದ್ದು ಮತ್ತು ಮೂರ್ತೆಲ್ ಯೋಜನೆ ಎಂಬುದಾಗಿ ಮಿ ಎಟ್ಲಿಯವರು ಅಭಿಮಾನ ಪೂರ್ವಕ ಹೇಳಿರುತ್ತಾರೆ. ಭಾರತಕ್ಕೆ ತನ್ನ ಹಕ್ಕಿನ ಸ್ವಾತಂತ್ರ್ಯವನ್ನು ಬಿಟ್ಟುಕೊಟ್ಟ ಬ್ರಿಟೈನಿನ ಲೇಬರ್ ಸರಕಾರದ ಮೇಲೆ ಭಾರತೀಯರು ಅಭಿಮಾನ ಮತ್ತು ಸಹಾನುಭೂತಿ ವ್ಯಕ್ತಪಡಿಸುವುದು. ಅಪ್ರಾಸಂಗಿಕವಾಗಲಾರದು. ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಲೇಬರ್ ಪಕ್ಷಕ್ಕೆ ಯಶಕೋರಿದರೆ ಅದು ಯಾವ ದೃಷ್ಟಿಯಲ್ಲಿಯೂ ತಪ್ಪಾಗಲಾರದು.

ಜನತೆಯಲ್ಲಿ ಅರಿಕೆ.

ಪ್ರಯಾಣಿಕರ ಅನುಕೂಲತೆಯ ದೃಷ್ಟಿಯಿಂದ ಜನವರಿ ತಾರೀಕು ಒಂದರಿಂದ ನಮ್ಮ ಹೊಸ ಬಸ್ ಸರ್ವಿಸ್ಸೊಂದು ಮೈಸೂರಿನಿಂದ ಗೋಣಿಕೊಪ್ಪಲು ಮಾರ್ಗವಾಗಿ ವೀರಾಜಪೇಟೆಗೆ ನಡೆಯುತ್ತಿದೆ. ಬೆಳಿಗ್ಗೆ ೮ ಗಂಟೆಗೆ ಮೈಸೂರಿನಿಂದ ಹೊರಟು ೧೨ ಗಂಟೆಗೆ ವೀರಾಜಪೇಟೆಗೆ ತಲಪುವದು. ಮಧ್ಯಾಹ್ನ ೧೨-೩೦ ಗಂಟೆಗೆ ಹೊರಟು ಸಾಯಂಕಾಲ ೪ ಗಂಟೆಗೆ ಮೈಸೂರಿಗೆ ತಲಪುತ್ತದೆ. ಪ್ರಯಾಣಿಕರಿಗೆ ಈ ಲೈನಿನಲ್ಲಿ ಸಕಲ ಸೌಕರ್ಯಗಳನ್ನೂ ಒದಗಿಸಲಾಗುವುದಲ್ಲದೆ ಅತ್ಯಂತ ತುರಿತದಿಂದ ಮೈಸೂರಿಗೆ ಹೋಗಿ ಬರಲು ಬಹು ಅನುಕೂಲವಿದೆ. ಪ್ರಯಾಣಿಕರು ಈ ಅನುಕೂಲತೆಯನ್ನು ಲಾಭದಾಯಕವಾಗಿ ಉಪಯೋಗಿಸಿಕೊಂಡು ನಮ್ಮನ್ನು ಪ್ರೋತ್ಸಾಹಿಸುವರಾಗಿ ನಂಬುತ್ತೇವೆ.

ಕೆ. ಬಿ. ಬಿದ್ದಯ್ಯ,
ಪ್ರೊಪ್ರೈಯಿಟರ್ ಕೆ. ಬಿ. ಮೋಟಾರ್ ಸರ್ವಿಸ್, ಮೈಸೂರು.

1-1

ಮಾರಾಟಕ್ಕಿದೆ.

ವೀರಾಜಪೇಟೆ ದೇವಾಂಗ ಬೀದಿಯಲ್ಲಿರುವ ನನ್ನ ಸ್ವಂತ 8 ಕೋಣೆಗಳಿರುವ ಮನೆ, ಉತ್ತಮವಾದ ಕೊಟ್ಟಿಗೆ, ಆದರ ಹಿತ್ತಲು ಮತ್ತು ಮನೆ ಹಿಂಭಾಗದಲ್ಲಿ 50 ಭಟ್ಟೆ ಭೂಮಿ ಮತ್ತು ಮುರಗಿಡಗಳಿರುವ 2 ಏಕ್ರೆ ಜಾಗ ಸಹ ಮಾರಾಟಕ್ಕಿದೆ. ರೂ. 12,000 ಸಾವಿರಕ್ಕೆ ಕೊಡಲ್ಪಡುವುದು. ಖರೀದುದಾರರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

B. M MUDDAVVA,
Do. No. 1663.
Bar line Road,
Chickmagalore.

ಅಂಗಡಿಮನೆ ಮಾರಾಟಕ್ಕಿದೆ.

ಮಡಿಕೇರಿ ಮಹದೇವಪೇಟೆ ಬ್ಲಾಕು ನಂ. 4ರಲ್ಲಿ ಅಂಗಡಿ ವ್ಯಾಪಾರಕ್ಕೂ, ವಾಸಕ್ಕೂ ಲಾಯಕ್ಕಾಗಿರುವ ತಿಂಗಳಿಗೆ 35 ರೂಪಾಯಿ ಬಾಡಿಗೆ ಬರುತ್ತಿರುವ ಮಹಡಿಮನೆ ಮಾರಾಟಕ್ಕಿದೆ. ಬೆಲೆ 12 ಸಾವಿರ ರೂಪಾಯಿಗಳು ಅಥವಾ ಅದರ ಸಮೀಪ. ಕಾಯಿಸದಾರರು ಕೆಳಗಿನ ಅಡ್ರೆಸಿಗೆ ಪತ್ರವ್ಯವಹಾರ ಮಾಡಬಹುದು.

"K"
C/o. Kodagu,
Mercara.

2-2

ಬಟ್ಟೆ ಬೇಕೆ?

ಮದುವೆ ಸಮಾರಂಭಗಳಿಗೆ ಬೇಕಾದ ನಾನಾ ರೀತಿಯ ಬೆಂಗಾಲ್ ಬೆನಾರಿಸ್ ಸಿಲ್ಕುಗಳು, ಸೇಲಂ, ಮಧುರಾ ಜವುಳಿಗಳು, ಉತ್ತಮ ಉಲನ್ ಬಟ್ಟೆಗಳು ಕಳೆದ ವರ್ಷದ ಬೆಲೆಗಿಂತಾ ಶೇಕಡ ೫೦% ರಷ್ಟು ಅಡಿಮೆ ದರದಲ್ಲಿ ದೊರೆಯುವವು.

ಅತ್ಯುತ್ತಮ ಮೂದರಿಯ ಬೆನಾರಿಸ್ ಮತ್ತು ಕಾಶ್ಮೀರ್ ಬಟ್ಟೆಗಳು ಸದಾ ದೊರೆಯುವವು.

ನಾನೂರು ರೂಪಾಯಿಗಳಿಗೆ ಮೇಲ್ಪಟ್ಟು ಬಟ್ಟೆ ತೆಗೆಯುವವರು ಈ ಪತ್ರಿಕೆ ತಿಳಿಸಿದಲ್ಲಿ ಅವರವರ ಮನೆ ಬಾಗಿಲಿಗೆ ತಂದು ಸರಬರಾಯಿ ಮಾಡಲಾಗುವದು.

ಒಮ್ಮೆ ಬಂದು ಪರೀಕ್ಷಿಸಿರಿ.

ವಲ್ಲಿ ಮೊಹಿದಿನ್, ಸಾಹೇಬ್ & ಬ್ರದರ್ಸ್,
ಸಿಲ್ಕ್ ಮತ್ತು ಕಾಟನ್ ವ್ಯಾಪಾರಿಗಳು.
ವೀರಾಜಪೇಟೆ (ಕೊಡಗು)

12-7

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್, ಫ್ರೇಜರ್ ಪೇಟೆ. ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿದ್ದು ಮಣ್ಣಾಪಾಲಾಗಿ ಹೋಗುತ್ತಿರುವ ಮೂಳೆಗಳನ್ನು ಶೇಖರಿಸಿಕೊಡಲು ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ.

ನೇಮಕವಾದ ಏಜೆಂಟರುಗಳು ಕಂಪೆನಿಯಿಂದ ಗೊತ್ತಾದ ಸ್ಥಳಕ್ಕೆ ಮೂಳೆಗಳನ್ನು ಸಾಗಿಸಿ ಕೊಟ್ಟಲ್ಲು ಮಣ ಒಂದರ ರೂ. 0-12-0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫ್ರೇಜರ್‌ಪೇಟೆ,
ತಾ. 32-9-49.

ಕೆ. ಕೆ. ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

ಗಮನಿಸಿರಿ!

ದಿನವಹಿ ಹೆಚ್ಚುತ್ತಿರುವ ಗ್ರಾಹಕರ ಬೇಡಿಕೆಯನ್ನು ಸಲ್ಲಿಸಲು ನಮ್ಮ ಅಂಗಡಿಯನ್ನು ವಿಸ್ತರಿಸಿರುವದಲ್ಲದೆ ಅತ್ಯುತ್ತಮ ಸಿಲ್ಕ್, ಉಲನ್ ಮತ್ತು ಮಿಲ್ ಬಟ್ಟೆಗಳ ಯಥೇಚ್ಛ ಸ್ಟಾಕ್ ಇಡಲಾಗಿದೆ.
ಯಾವ ನಮೂನೆಯ ಬಟ್ಟೆಗೂ ಆದರ್ಶವೆನಿಸಿದೆ.
ಆರ್ಡರ್ ಪ್ರಕಾರ ಅತೀ ಆಧುನಿಕ ರೀತಿಯಲ್ಲಿ
ಉಡುಪುಗಳನ್ನು ಹೊಲಿದು ತಯಾರಿಸಿ
ಕೊಡಲಾಗುವದು.

ಬಟ್ಟೆಯ ವಿಚಾರದಲ್ಲಿ ಏನು ಬೇಕು! ಪಟ್ಟೂ ಬ್ರದರ್ಸ್ ಎತ್ತಿದ ಕೈ!

ಪಟ್ಟೂ ಬ್ರದರ್ಸ್,
ಲಕ್ಷ್ಮೀ ಬಿಲ್ಡಿಂಗ್ಸ್,
ಟೌನ್‌ಹಾಲಿನ ಎದುರು, ಮೈಸೂರು

52-7

ಪಾಕಿಸ್ಥಾನಕ್ಕೆ ಎಚ್ಚರಿಕೆ.

ಲೇ:–ಡಾ. ಹರ್ಡೀಕರ್.

'ಕಳೆದ ೩೦ ಅಥವಾ ೪೦ ವರ್ಷಗಳ ಸಾರ್ವಜನಿಕ ಜೀವನದಲ್ಲಿ ನಾನು ಗಳಿಸಿದ ಪುಣ್ಯವೆಲ್ಲವನ್ನೂ ಪಣಕ್ಕೆ ಹಚ್ಚಿ, ಪಾಕಿಸ್ಥಾನದಲ್ಲಿ ಕಾಶ್ಮೀರ ಪ್ರಶ್ನೆಯ ಬಗ್ಗೆ ಹೇಳಲ್ಪಡುತ್ತಿರುವುದೆಲ್ಲವೂ ಸುಳ್ಳಿನ ಕಂತೆಯಾಗಿದೆ ಎಂದು ನಾನು ಸಾರುತ್ತೇನೆ'

ಈ ಮೇಲಿನ ಮಾತುಗಳನ್ನು ಆಡಿದವರು ತಮ್ಮ ಪುಣ್ಯವನ್ನು ಪಣಕ್ಕೆ ಹಚ್ಚಿದ ಪಂ. ಜವಾಹರಲಾಲರ ಮನಸ್ಸನ್ನು ಎಷ್ಟರ ಮಟ್ಟಿಗೆ ನೋಂದಿರಬೇಕು! ತಾವು ಕೈಕೊಂಡಿರುವ ಕಾರ್ಯದ ಬಗ್ಗೆ ಸಂಪೂರ್ಣ ಮನವರಿಕೆಯಿಲ್ಲದೆ ಇಂತಹ ಮಾತುಗಳನ್ನು ಆಡುವವರು ಜವಾಹರಲಾಲರಲ್ಲ.

ಕಳೆದ ಎರಡು ವರ್ಷ ಮತ್ತು ಆದಕ್ಕೆ ಮೇಲ್ಪಟ್ಟ ಅವಧಿಯಿಂದ ಕಾಶ್ಮೀರದ ಪ್ರಶ್ನೆಯು ಭಾರತೀಯರ ಮತ್ತು ಜಗತ್ತಿನ ಮುಂದೆ ಇದೆ. ಭಾರತ ಮತ್ತು ಪಾಕಿಸ್ಥಾನಗಳ ನಡುವಿನ ಈ ಪ್ರಶ್ನೆಯನ್ನು ಒಮ್ಮೆ ಶಾಶ್ವತವಾಗಿ ಬಗೆಹರಿಸುವ ಉದ್ದೇಶದಿಂದ, ಅದರ ರಾಜಕಾರಣವನ್ನು ಅಭ್ಯಾಸಿಸಿದವರೆಲ್ಲರೂ ಅದರ ಬಗ್ಗೆ ವಿವರವಾಗಿ ಚರ್ಚಿಸಿದ್ದಾರೆ. ಈ ಎರಡು ದೇಶಗಳ ಪ್ರತಿನಿಧಿಗಳು ಅನೇಕ ಸಲ ಪರಸ್ಪರ ಭೇಟ್ಟಿಯಾಗಿದ್ದಾರೆ ಆವರೆಲ್ಲರಿಗೂ ಅಲ್ಲಿಯ ನಿಜಪರಿಸ್ಥಿತಿಯ ಬಗ್ಗೆ ಜ್ಞಾನವು ಉಂಟಾಗಿರಲು ಸಾಕು. ಹೀಗಿದ್ದರೂ ಪಾಕಿಸ್ಥಾನ ಸರಕಾರವು ಮತ್ತು ಅಲ್ಲಿಯ ಜನರು ಹಿಂದ ಸ್ಥಾನದ ವಿರುದ್ಧವಾಗಿ ಅಸತ್ಯ ಪ್ರಚಾರವನ್ನು ಮಾಡುತ್ತ ಹೋದರೆ, ಅದರ ಪರಿಣಾಮವು, ಎಲ್ಲರೊಡನೆ ಸರಳ ರೀತಿಯಿಂದ ವರ್ತಿಸುವಂಥವರ ಮೇಲೆ ಆಗದಿರಲಾರದು. ಈ ಕಾರಣದಿಂದ ಪಂಡಿತಜಿಯವರು ತಮ್ಮ ಪುಣ್ಯವನ್ನು ಪಣಕ್ಕೆ ಹಚ್ಚಿ ಮೇಲಿನ ಉದ್ಗಾರವನ್ನು ತೆಗೆದದರಲ್ಲಿ ಯಾರಿಗೂ ಆಶ್ಚರ್ಯವೆನಿಸಲಾರದು.

ಸುಳ್ಳು ಪ್ರಚಾರ.

ಪಾಕಿಸ್ಥಾನವು ನಡೆಸಿದ ಪ್ರಚಾರದ ಬಗ್ಗೆ ಪಂಡಿತಜೀಯವರು ಹೀಗೆಂದಿದ್ದಾರೆ. 'ಪಾಕಿಸ್ಥಾನ ಸರಕಾರ, ಅಲ್ಲಿಯ ವ್ಯಕ್ತಿಗಳು ಮತ್ತು ವರ್ತಮಾನ ಪತ್ರಗಳು ನಡೆಸಿದ ಪ್ರಚಾರ ಅಸತ್ಯ ಸಂಗತಿಗಳನ್ನು ಕಂಡು ನನಗೆ ಆಶ್ಚರ್ಯವಾಗಿದೆ. ಹಲ ಕೆಲವು ಸಂಗತಿಗಳಲ್ಲಿ ಒನ್ಮೊಮ್ಮೆಯಾದರೂ ಸ್ವಲ್ಪ ಸತ್ಯವಿರುತ್ತದೆ. ಆದರೆ ಪಾಕಿಸ್ಥಾನದ ಜನರು ಮತ್ತು ವರ್ತಮಾನ ಪತ್ರಗಳು ಕಾಶ್ಮೀರದ ಬಗ್ಗೆ ನಡೆಸಿದ ಪ್ರಚಾರವು ಅತ್ಯಂತ ರೂಹಗೆಟ್ಟದ್ದೂ ಹೇಯವಾದದ್ದೂ ಆಗಿದೆ.'

ಪಾಕಿಸ್ಥಾನವು ಹೀಗೇಕೆ ಮಾಡುತ್ತಿದೆ? ಈ ಪ್ರಶ್ನೆಗೆ ಒಂದೇ ಒಂದು ಉತ್ತರ ವಿದೆ. ಅದರ ಉದ್ದೇಶವು ಹಿಂದುಸ್ಥಾನವನ್ನು ಹಿಚಕುಪುದಾಗಿದೆ. ಈ ಕಾರ್ಯವನ್ನು ಅದು ಸರಳಮಾರ್ಗದಿಂದ ಸಾಧಿಸುವುದು ಸಾಧ್ಯವಿಲ್ಲವಾದ್ದರಿಂದ, ಅಸತ್ಯ ಪೂರ್ಣವಾದ ಪ್ರಚಾರ ಮಾಡಿ ಮತ್ತು ಹಿಂದುಸ್ಥಾನಕ್ಕೆ ಜಗತ್ತಿನ ದೃಷ್ಟಿಯಲ್ಲಿ ಅಪಯಶಸ್ಸನ್ನು ಉಂಟುಮಾಡಿ ಅದನ್ನು ಪೂರೈಸಲು ಯತ್ನಿಸುತ್ತಿದೆ. ಭಾರತವು ಪಾಕಿಸ್ಥಾನಕ್ಕೆ ಯಾವುದೇ ರೀತಿಯ ಅಪಾಯವನ್ನು ಮಾಡಲು ಎಂದೂ ಮನಸ್ಸು ಮಾಡಿಲ್ಲ. ಅದರ ಬೇಡಿಕೆಗಳನ್ನು ಆಪಷ್ಟು ಪೂರೈಸಲು ಹೆಣಗಿದೆ.

ತಾಳ್ಮೆ ವಿಮರ್ಶಿಸುತ್ತಿದೆ.

ಈ ಸಂಬಂಧದಲ್ಲಿ ಪಂಡಿತರು ಅನ್ನುವುದೇನೆಂದರೆ:–

'ನಾವು ಪಾಕಿಸ್ಥಾನ, ಗಡಿನಾಡು ಪ್ರಾಂತ, ಗುಡ್ಡಗಾಡು ಪ್ರದೇಶ, ಪೂರ್ವ ಪಾಕಿಸ್ಥಾನ ಮೊದಲಾದವುಗಳಲ್ಲಿಯ ಪರಿಸ್ಥಿತಿಯ ಬಗ್ಗೆ ಹೆಚ್ಚಾಗಿ ಮಾತಾಡುತ್ತಿಲ್ಲ. ನಮ್ಮಲ್ಲಿ ಸೌಜನ್ಯವಿದ್ದುದರಿಂದ ನಾವು ಸುಮ್ಮನಿರುತ್ತೇವೆ. ನಮ್ಮವರೇ ಆದ ಮತ್ತು ನಮಗೆ ತೀರ ಹತ್ತಿರದ ಹಾಗೂ ಸ್ನೇಹದ ಸಹೋದ್ಯೋಗಿಗಳು ಗಡಿನಾಡು ಪ್ರಾಂತದಲ್ಲಿ ಕಳೆದ ಎರಡು ಮೂರು ವರ್ಷಗಳಿಂದ ಕಾರಾಗೃಹದಲ್ಲಿ ಕೊಳೆಯುತ್ತಿದ್ದಾರೆ. ಈಡೀ ಗಡಿನಾಡು ಪ್ರಾಂತವು ಒಂದು ದೊಡ್ಡ ಕಾರಾಗೃಹವೇ ಆಗಿ ಪರಿಣಮಿಸಿದೆ. ಗುಡ್ಡಗಾಡು ಜನರ ಇಡೀ ಪ್ರದೇಶವು ಅಶಾಂತ ವಾತಾವರಣದಿಂದ ಕುದಿಯುತ್ತಿದೆ. ಅವರ ವಿಷಯದಲ್ಲಿಯೂ, ನಾವು ಏನನ್ನು ಅಂದಿಲ್ಲ. ಗಡಿನಾಡು ಪ್ರಾಂತದಲ್ಲಿ ಹಲ ಕೆಲವು ಸಣ್ಣ ಸಂಸ್ಥಾನಗಳಿವೆ. ನನಗೆ ಅವುಗಳ ಬಗ್ಗೆ ಹೆಚ್ಚಿನ ಸಂಗತಿಗಳು ತಿಳಿದಿಲ್ಲ. ಆದರೆ ಅಂಬ ಮತ್ತು ಇತರ ಸಂಸ್ಥಾನಗಳ ಬಗ್ಗೆ ಪಾಕಿಸ್ಥಾನ ವರ್ತಮಾನ ಪತ್ರಗಳಲ್ಲಿಯೇ ಪ್ರಕಟವಾದ ಸುದ್ದಿಗಳನ್ನು ನೋಡಬಹುದಾಗಿದೆ. ಅವುಗಳ ಮೇರೆಗೆ ಅಲ್ಲಿಯ ವಾತಾವರಣವು ಹೇಯಪೂರ್ಣವಾಗಿದೆ. ಈ ಅಸತ್ಯ ಪ್ರಚಾರದಿಂದ ಮತ್ತು ಆದಕ್ಕೆ ಸರದೇಶೀಯ ವರ್ತಮಾನ ಪತ್ರಗಳು ಆಗಾಗ್ಗೆ ಕೊಡುತ್ತಿರುವ ಉತ್ತೇಜನದ ಮೂಲಕ ನನ್ನ ತಾಳ್ಮೆಯು ಸ್ವಲ್ಪ ವಿಮರ್ಶಿಸುತ್ತಿದೆ. ಗುಪ್ತ ಚಟುವಟಿಕೆ, ನಿಜ ಸಂಗತಿಗಳನ್ನು ಮರೆಮಾಡುವುದು, ಅನವಶ್ಯಕ ಮತ್ತು ತಾತ್ಪೂರ್ತಿಕ ವಿಚಾರಗಳ ಮೇಲೆ ನಿರ್ಣಯಕ್ಕೆ ಬರುವುದು ಇವೇ ಮೊದಲಾದ ವಿಷಯಗಳು ಬೇಸರ ಮೂಡಿವೆ.

ಈ ಉದ್ಗಾರಗಳನ್ನು ಪಂಡಿತಜೀಯವರು ಎಷ್ಟು ಶ್ರೀಕಾರಣಪೂರ್ವಕವಾಗಿ ತೆಗೆದಿದ್ದಾರೆ! ಮೂವತ್ತು ವರ್ಷಗಳ ಪರಿಗೆ ಮಹಾತ್ಮಾಜೀಯವರ ಪಾದಗಳ ಹತ್ತಿರ ಕುಳಿತ ಅವರಿಂದ ಮಾರ್ಗದರ್ಶನ ಹೊಂದಿದ ಅವರು ಇಂತಹ ಉದ್ಗಾರಗಳನ್ನು ತೆಗೆಯದೆ ಇರುವುದು ಹೇಗೆ ಸಾಧ್ಯ? ಅವು ಸರಿಯೂದಂಥವು. ಇಂತಹ ಅಭಿಪ್ರಾಯವನ್ನು ಗಾಂಧಿಜೀಯವರ ಶಿಷ್ಯನಾವ ಯಾವನೊಬ್ಬನು ಪಡುವುದು ಯೋಗ್ಯವೇ ಆಗಿದೆ ಮತ್ತು ಆಗಲೇಬೇಕು.

ಭಾರತವು ತನ್ನ ಜವಾಹರನೊಡನೆ ಸಮರಸವಾಗಿದೆ. ಯಾವುದೇ ಪ್ರಸಂಗದಲ್ಲಿ ಅದು ಜವಾಹರನ ಬೆನ್ನಿಗೆ ನಿಲ್ಲದೆ ಇರಲಾರದು. ತನ್ನ ಭವಿಷ್ಯವು ಜವಾಹರನ ಕೈಯಲ್ಲಿಯೇ ಇರುವದೆಂದೂ ಅವನು ಅನ್ನುವ ಮತ್ತು ಮಾಡುವ ಸರ್ವವು ತನ್ನ ಕಲ್ಯಾಣಕ್ಕಾಗಿಯೇ ಇರುವದೆಂದೂ ಹಿಂದುಸ್ಥಾನವು ತಿಳಿಯುತ್ತಿದೆ. ಆದ್ದರಿಂದ ಜವಾಹರನು ಹೇಳಿದರೆ, ಭಾರತೀಯರು ಬೆಂಕಿಯಲ್ಲಿ ಹಾರಲಾದರೂ ಸಿದ್ಧರಿದ್ದಾರೆ. ಪಾಕಿಸ್ಥಾನದ ವಿಚಾರವು, ಯುದ್ಧವನ್ನೇ ಬಯಸುತ್ತಿದ್ದರೆ ಅದನ್ನು ಪೂರೈಸುವ ಕಾರ್ಯದಲ್ಲಿ ಕೂಡ ಭಾರತವು ಹಿಂದೆ ಬೀಳಲಾರದು. ಆಗ ಬರಿ ಜವಾಹರನದೇ ಏಕೆ? ಇಡಿ ಭಾರತದ ಪುಣ್ಯವು ಪಣಕ್ಕೆ ಹಚ್ಚಲ್ಪಡದೆ ಇರಲಾರದು.

ಪಾಕಿಸ್ಥಾನಕ್ಕೆ ಏನು ಬೇಕು? ಅದು ತನ್ನ ಈ ಹೇಯವಾದ ಪ್ರಚಾರವನ್ನು ನಿಲ್ಲಿಸುವುದೋ ಅಥವಾ ಭಾರತದ ಶಕ್ತಿಯನ್ನು ಪರೀಕ್ಷಿಸಲು ಇಚ್ಚಿಸುವದೋ?

ಎರಡನೆಯದಕ್ಕೆ ಅದು ಕೈಹಾಕಲಿಕ್ಕಿಲ್ಲವೆಂದು ನಾನು ಆಶಿಸುತ್ತೇನೆ.

ಜೈ ಹಿಂದ್.

ಭಾರತದಲ್ಲಿ ಅಣುಶಕ್ತಿ ತಯಾರಿ.

ಮುಖ್ಯಮಂತ್ರಿ ಪಂಡಿತ ನೆಹರುಗಳು ಪಾರ್ಲಿಮೆಂಟಿನಲ್ಲಿ ಭಾರತವು ಅಣುಶಕ್ತಿಯನ್ನು ಉತ್ಪಾದಿಸುವ ವಿಷಯದಲ್ಲಿ ಹೇಳಿಕೆ ಕೊಡುತ್ತಾ, ಭಾರತದಲ್ಲಿ ಅಣುಶಕ್ತಿಯನ್ನು ಉತ್ಪಾದಿಸಲು ಬೇಕಾಗುವ ಕಚ್ಚಾ ಮೂಲುಗಳನ್ನು ಸಂಗ್ರಹಿಸುವ ಕಾರ್ಯ ನಡೆದಿದ್ದು ಕೆಲವು ವರ್ಷಗಳಲ್ಲೇ ಅಂಥಾ ಮೂಲುಗಳನ್ನು ಸಂಗ್ರಹಿಸಬಹುದಾಗಿದೆ. ಇನ್ನು ಅಣುಶಕ್ತಿಯ ಉತ್ಪಾದನೆಯ ಬಗ್ಗೆ ಒಂದು ಕಾರ್ಖಾನೆಯನ್ನು ಏರ್ಪಡಿಸಲಾಗುವುದಿದ್ದು ಅದು ಇನ್ನೊಂದು ವರ್ಷದೊಳಗೇನೆ ಕಾರ್ಯನಡೆಯಲಿದೆ. ಈ ಕಾರ್ಯವನ್ನು ಕೈಕೊಳ್ಳುವ ಬಗ್ಗೆ ಉತ್ಪಾದನೆಯ ವಿವಿಧ ವಿಷಯಗಳನ್ನು ತಿಳಿದ ವಿಜ್ಞಾನಿಗಳನ್ನಾಗಲೇ ತರಬೇತಿ ಮಾಡಲಾಗಿದ್ದು ಇನ್ನೂ ಈ ಬಗ್ಗೆ ಬೇಕಾದವರ ಮತ್ತು ಅಣುಶಕ್ತಿಯ ಕೆಲಸಕ್ಕೆ ಬೇಕಾಗುವವರ ತರಬೇತಿ ನಡೆದಿದೆ–ಎಂದು ಹೇಳಿದರು.

ಅಣುಶಕ್ತಿಯ ಉತ್ಪಾದನೆಯ ಬಗ್ಗೆ ಆನೇರಿಕದಲ್ಲಿ ದೊಂಕಿದಷ್ಟು ಆರ್ಥಿಕ ಸಹಾಯವು ಇಲ್ಲಿ ದೊರಕುವುದಿಲ್ಲವಾದರೂ ಸಾಧ್ಯವಾದಷ್ಟು ಹಣ ಒದಗಿಸಿಕೊಳ್ಳಲಾಗುವುದೆಂದೂ ಮುಖ್ಯ ಮಂತ್ರಿಗಳು ಸಭೆಯಲ್ಲಿ ಹೇಳಿದರು.

ಭಾರತದ ವಿಜ್ಞಾನಿಗಳಿಗೆ ಸಾಕಷ್ಟು ಅವಕಾಶ ಒದಗಿಸಿಕೊಟ್ಟರೆ ಅವರು ಒಂದು ವರ್ಷದ ಅವಧಿಯಲ್ಲೇ ಅಣುಶಕ್ತಿಯನ್ನು ಉತ್ಪಾದಿಸಲು ಸಮರ್ಥರಿರುವರು ಎಂಬುದಾಗಿ ಭಾರತದ ವೈಜ್ಞಾನಿಕ ಸಹಯೋಗದ ಡೈರೆಕ್ಟರರು ಕೊಟ್ಟ ಹೇಳಿಕೆಯ ಕಡೆಗೆ ಶ್ರೀ. ಆರ್. ಕೆ. ಸಿಧ್ವರವರು ಮುಖ್ಯ ಮಂತ್ರಿಗಳ ಲಕ್ಷ್ಯವನ್ನೆಳೆದಾಗ ಅವರು ಸರಕಾರದ ಈ ಕಾರ್ಯದಲ್ಲಿ ವಿಜ್ಞಾನಿಗಳಿಗೆ ಆತಂಕವನ್ನುಂಟುಮಾಡುವುದಿಲ್ಲ. ಈ ಬಗ್ಗೆ ಸಾರ್ವಜನಿಕರಲ್ಲಿ ವಿಶ್ವಾಸವಿಲ್ಲದಿರುವುದು ಸರಕಾರದ ಶಕ್ತಿ ವಿಮರ್ಶಿಸುವ ಪರಿಸ್ಥಿತಿಯಿಂದ ಎಂಬುದಾಗಿ ಶ್ರೀಯುತ ಸಿಧ್ವರಿಗೆ ಆಶ್ವಾಸನೆ ಕೊಟ್ಟರು.

'ಅಣುಶಕ್ತಿಯ ಉತ್ಪಾದನೆಯ ಬಗ್ಗೆ ಸರಕಾರವು ವಿಜ್ಞಾನಿಗಳಿಗೆ ವಿಶಾಲವಾಗಿ ಕೊಡುವ ಹಣವು ಸಾಕೆ?' ಎಂದು ಸರ್ದಾರ್ ಭೂಪೆಂದ್ರ ಸಿಂಘ್ ಮಾನ್ ರವರು ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತಾ 'ಹಣವು ಸಾಕೊ ಸಾಕಾಗದೋ ಎಂದು ಹೇಳುವುದು ಅಸಾಧ್ಯವಾದರೂ ನಾವು ನಮ್ಮ ಧ್ಯೇಯವನ್ನು ಸಾಧಿಸಬೇಕು. ಪ್ರಬಲ ಮೇರಿಕೆಯಂತೆ ನಾವೂ ಮಾಡುವದು ಸಾಧ್ಯವಿಲ್ಲ. ಹಣದ ಅಭಾವವು ಮಾತ್ರವಲ್ಲ ಬಗ್ಗೆ ತೆರಬೇತಿ ಹೊಂದಿದವರಿಲ್ಲದಿರುವುದೂ ಆಗಿದೆ. ಸದ್ಯಕ್ಕೆ ಮೊನಜ್ಯಾಟ್ ಕಾರ್ಖಾನೆಯನ್ನು ತೆರೆಯಲಾಗುವುದು. ನಂತರ ಸಂಶೋಧನಾ ಕೆಲಸವೂ, ನುರಿತ ಭಾರತೀಯರೂ ಬೇಕಾಗಿದ್ದಾರೆ' ಎಂದು ಮುಖ್ಯ ಮಂತ್ರಿಗಳು ಹೇಳಿದರು.

ಶ್ರೀ. ಕೆ. ಹನುಮಂತಯ್ಯನವರ ಒಂದು ಪ್ರಶ್ನೆಗೆ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾ ನಾವು ಇತರ ರಾಷ್ಟ್ರಗಳ ವೈಜ್ಞಾನಿಕರೊಡನೆ ಮತ್ತು ಅಣುಶಕ್ತಿ ವಿಚಾರಗಳೊಡನೆ ಸಂಪರ್ಕದಿಂದಿದ್ದೇವೆ ಮತ್ತಲ್ಲಿಯೂ ಕೆಲವರನ್ನು ಅಲ್ಲಿಗೆ ತರಬೇತಿಗಾಗಿ ಕಳುಹಿಸಲಾಗಿದೆ. ಆದರೆ ಇಂಥ ಕಾರ್ಯಕ್ಕೆ ಪರದೇಶಗಳಿಂದ ಜನರನ್ನು ಆಮಂತ್ರಿಸುವದೇ ನಮಗೆ ಇಚ್ಛೆಯಿಲ್ಲ. ಪರದೇಶಗಳ ವಿಜ್ಞಾನಿಗಳೊಡನೆ ನಾವು ಸಂಬಂಧವಿಟ್ಟುಕೊಂಡಿರುವುದಲ್ಲದೆ ಕಳೆದ ತಿಂಗಳಲ್ಲಿ ಇಲ್ಲಿ ಕೂಡಿದ ವೈಜ್ಞಾನಿಕ ಕಾಂಗ್ರೆಸಿಗೆ ಬಂದ ಹಲವು ಸುಪ್ರಸಿದ್ಧ ವಿಜ್ಞಾನಿಗಳೊಡನೆ ಈ ವಿಷಯದ ಕೂಲಂಕುಷ ಚರ್ಚಿಸಿರುವೆವು ಎಂದರು.

'ಕಾವನ್‌ವೆಲ್ತ್‌ನಲ್ಲಿ ಉಳಿಯುವುದಕ್ಕೆ ಒಪ್ಪಿರುವುದರಿಂದ ಬ್ರಿಟನ್‌ನಿಂದ ನಮ್ಮ ಸರಕಾರವು ಎಲ್ಲಾ ಸಮರಾಚಾರಗಳನ್ನು ತಿಳಿದಿದೆಯೇ?' ಎಂದು ಶ್ರೀ. ಮೋಹನ್‌ಲಾಲ್ ಗೌತಮರು ಕೇಳಿದ ಪ್ರಶ್ನೆಗೆ ಪಂಡಿತ ನೆಹರುಗಳು ಉತ್ತರಕೊಡುತ್ತಾ 'ಕಾವನ್‌ವೆಲ್ತ್‌ನೊಳಗಾಗಲಿ ಹೊರಗಾಗಲಿ ಇಂಥಾ ಒಪ್ಪಂದವಿದ್ದುವುದಿಲ್ಲ. ಕಾವನ್‌ವೆಲ್ತ್‌ನಲ್ಲಿರುವ ಕೆಲವು ಸದಸ್ಯರಿಗೆ ಎಲ್ಲಾ ಸಮರಾಚಾರ ತಿಳಿಯುವುದೇ ಇಲ್ಲ' ಎಂದು ಹೇಳಿದರು.

ಅಣುಶಕ್ತಿಯನ್ನು ವಿನಾಶಕಾರ್ಯದಲ್ಲಿ ಉಪಯೋಗಿಸದಂತೆ ಪ್ರತಿಬಂಧಿಸುವ ಸಲುವಾಗಿ ಅಣುಶಕ್ತಿ ನಿಯಂತ್ರಣ ಸಮಿತಿಯಲ್ಲಿ ಭಾರತವು ಮಾಡಿದ ಪ್ರಯತ್ನಗಳು ಎಷ್ಟರ ಮಟ್ಟಿಗೆ ಸಫಲವಾಗಿವೆ ಎಂದು ಶ್ರೀ. ಎಚ್. ವಿ. ಕಾಮತರು ಕೇಳಿದ ಪ್ರಶ್ನೆಗೆ ಪಂಡಿತ ನೆಹರುಗಳು ಉತ್ತರ ಕೊಡುತ್ತಾ, ಈ ಪ್ರಯತ್ನಗಳೇನೂ ಯಶಸ್ವಿಯಾಗಿರುವದಿಲ್ಲ. ಈ ವಿಷಯವು ಬಿಕ್ಕಟ್ಟಿಗೊಳಗಾಗಿದೆ ಎಂದರು.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:– ಲಾಲ ಶಂಕರ್ ಲಾಲ್.

ಮುಖ್ಯ ಖಜೇರಿ:– ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಆರ್ಗನೈಜರ್
ದಕ್ಷಿಣ ಕೊಡಗು, ಪೊನ್ನಂಪೇಟೆ.

ಅಥವಾ

ಯಂ. ಯು. ಅಚ್ಚಣ್ಣಿ,
ಏಜೆನ್ಸಿ ಸುಪರಿಂಟೆಂಡೆಂಟ್,
ಮಡಿಕೇರಿ, ಕೊಡಗು.

ಆರ್ಗನೈಜರ್
ಉತ್ತರ ಕೊಡಗು, ಮಡಿಕೇರಿ.

ಅಥವಾ

ಎಂ. ಎ. ಬೆಳ್ಯಪ್ಪ,
ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟಾ, ಮಂಗಳೂರು.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) ,, 262 ,, 274 ,,
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make) ಕ್ರಯ ರೂ. 627–5–0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4–10–0
6. 12, 16, 20ನೇ ನಂಬರು ಕೋವಿಗಳ ತೋಟಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
52–26 ಗೌರವ ಕಾರ್ಯದರ್ಶಿ.

ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಾಮುಖ್ಯಾಂಶಗಳು.

ಹೊಸ ಉದ್ಯಮ ರೂ. .... 6,13,00,000 ಮೀರಿದೆ.
ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ. .... 27,73,00,000 ,,
ಒಟ್ಟು ನಿಧಿ. ರೂ. .... 8,30,00,000 ,,
ಸ್ಥಾಪಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು 10,96,00,000 ,,
1,28,000 ಕ್ಕೆ ಮೀರಿದ ತೃಪ್ತಿ ಪಡೆದ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ.—1897

ರೋಶನ್‌ಲಾಲ್, ಜನರಲ್ ಮೇನೇಜರ್.

ಪ್ರಧಾನ ಕಛೇರಿ: ಎಂಪೈರ್ ಹೌಸ್, ಹಾರ್ನ್‌ಬಿ. ರೋಡ್, ಫೋರ್ಟ್, ಬೊಂಬಾಯಿ.

ಅಂಗ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Lt.d,

H: O: BOMBAY.] *[Established 1919.*

For particulars write to:

Sri B. A. Poovaiah *Organiser* *Pollibetta, Coorg.*

or

The Branch Manager, *22 B. Mahatma Gandhi Road, Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ಭದ್ರತೆ! 17 ವರ್ಷಗಳ ಪರಿಪಕ್ವ ಅನುಕೂಲತೆ !! ಅನುಭವಶೀಲತೆ!!

ದಿ ವಿಜಯ ಬ್ಯಾಂಕ್ ಲಿಮಿಟೆಡ್

ಮುಖ್ಯ ಖಜೇರಿ,
ಕದ್ರಿ ರೋಡ್, ಮಂಗಳೂರು.

ನಿರಖು ಠೇವಣಾತಿ ಬಡ್ಡಿದರ:–

3	ತಿಂಗಳು	3%
6	,,	3½%
12	,,	3¾%
24	,,	4 %

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂಗೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂಥಾ ¼% ಹೆಚ್ಚಿಗೆ.

ಶಾಖೆಗಳು:– ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.

ಎಲ್ಲಾ ವಿಧದ ಆಧುನಿಕ ಬ್ಯಾಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ಜಾಗ್ರತೆಯಿಂದ ನಡೆಸಿಕೊಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:– ಏಜಂಟ್,

ಮಡಿಕೇರಿ ಶಾಖೆ, ಮಡಿಕೇರಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1923ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ ರೂ. 10,00,000.
ವಸೂಲಾದ ಶೇರು ಮೊಬಲಗು ರೂ. 1,79,000.
ಕ್ಷೇಮನಿಧಿ ರೂ. 55,000.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆಸಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಅಳೀಸಿನಿಂದ ತಿಳಿದುಕೊಳ್ಳಬಹುದು.

ಎ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,
ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾನ್ಜಿ.

ಶ್ರೀ ಟಿ. ಎನ್. ಗೋವಿಂದರಾಜು, "ಕೊಡಗು" ಏಜಂಟರು, ವೀರಾಜಪೇಟೆ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.